ಸಂಪುಟ: 01 ಸಂಚಿಕೆ: 103 ಪುಟ: 04 ಬೆಲೆ: 02 ಮಂಗಳವಾರ ಸೆಪ್ಟೆಂಬರ್ 29 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು






Volume:01 Issue: 103 Pages:04 Price:02 TUESDAY SEPTEMBER 29 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಕೆಲವು ಮಹಾನುಭಾವರು ಬೇರೆಯವರ ಪುಣ್ಯದ ಕ್ಷೀರವನ್ನೆಲ್ಲಾ ಸವಿದು, ಕೊನೆಯಲ್ಲಿ ಪಾಪದ ಫಲ ಎಂದು ಹೇಳಿ ವಿಜೃಂಭಿಸುತ್ತಾರೆ.ಆಗ ಬೇರೆಯವರ ಪುಣ್ಯವು ಮರೆಮಾಚಿ ಪಾಪವೆ ಮೈಲುಗಲ್ಲಾಗುತ್ತದೆ. ಇದು ಇಂದಿನ ಕಲಿಯುಗದ ವಸ್ತುಸ್ಥಿತಿ.

ವಾಣಿ ಭಂಡಾರಿ.

# ಸಿಇಸಿ ಜ್ಞಾನೇಶ್ ಕುಮಾರ್ ವಿರುದ್ಧ ಸುಪ್ರೀಂಕೋರ್ಟ್‌ಗೆ ಮತ್ತೊಂದು ಅರ್ಜಿ

**ನವದೆಹಲಿ: ಭಾರತೀಯ ಚುನಾವಣಾ ಆಯೋಗದ ಆಂತರಿಕ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅಧಿಕಾರದ ಪ್ರಗತಿಪರ ಕೇಂದ್ರೀಕರಣ ನಡೆಯುತ್ತಿದೆ ಎಂದು ಆರೋಪಿಸಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮತ್ತೊಂದು (ಎರಡನೇ) ಅರ್ಜಿ ಸಲ್ಲಿಕೆಯಾಗಿದೆ.**

ಚುನಾವಣಾ ಆಯುಕ್ತರಾದ ಡಾ. ಸುಖ್‌ಬೀರ್ ಸಿಂಗ್ ಸಂಧು ಮತ್ತು ಡಾ. ವಿವೇಕ್ ಜೋಶಿ ಅವರ ಪೂರ್ವಾನುಮತಿ ಅಥವಾ ಒಪ್ಪಿಗೆಯಿಲ್ಲದೆ ಸಿಇಸಿ ಜ್ಞಾನೇಶ್ ಕುಮಾರ್ ಅವರು ಏಕಪಕ್ಷೀಯವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿ ರಾಕೇಶ್ ಕುಮಾರ್ ಸಿಂಗ್ ಎಂಬುವವರು ಈ ಹೊಸ ಅರ್ಜಿ ಸಲ್ಲಿಸಿದ್ದಾರೆ. ಚುನಾವಣಾ ಆಯೋಗವು ಮೂವರು ಸದಸ್ಯರನ್ನು ಒಳಗೊಂಡ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಪ್ರತಿಯೊಂದು ನಿರ್ಧಾರವೂ ಸರ್ವಾನುಮತದಿಂದ ಅಥವಾ ಬಹುಮತದ ಆಧಾರದ ಮೇಲೆ ರೂಪುಗೊಳ್ಳಬೇಕು ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.



ಆದರೆ, ಸಹ ಚುನಾವಣಾ ಆಯುಕ್ತರ ಒಪ್ಪಿಗೆಯಿಲ್ಲದೆ ಸಾಫ್ಟ್‌ವೇರ್ ಮಾರ್ಪಾಡುಗಳು, ಮಾರ್ಗಸೂಚಿಗಳು ಹಾಗೂ ನಿಯಮಗಳಲ್ಲಿ ಬದಲಾವಣೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಸಭೆಗಳ ಕಾರ್ಯಸೂಚಿ ಮತ್ತು ನಡಾವಳಿಗಳ ನಿರ್ವಹಣೆಯಲ್ಲಿ ವಿಳಂಬ ಅಥವಾ ಸಂಪೂರ್ಣ ಅನುಪಸ್ಥಿತಿಯೂ ಕಂಡುಬರುತ್ತಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಮತದಾರರ ಹೆಸರು ಸೇರ್ಪಡೆಗೆ ಬಳಸುವ ನಮೂನೆ 6 ಸೇರಿದಂತೆ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಗಳಲ್ಲಿ ಏಕಪಕ್ಷೀಯವಾಗಿ ಬದಲಾವಣೆ ತರಲಾಗಿದೆ ಎಂದು ಅರ್ಜಿದಾರರು ಆರೋಪಿಸಿದ್ದಾರೆ. ಇದಕ್ಕೂ ಮುನ್ನ, ಶುಕ್ರವಾರವಷ್ಟೇ ಸುಪ್ರೀಂಕೋರ್ಟ್ ವಕೀಲ ಶೈಲೇಂದ್ರ ಮಣಿ ತ್ರಿಪಾಠಿ ಅವರು ಸಂವಿಧಾನದ 32ನೇ ವಿಧಿಯಡಿ ಸಿಇಸಿ ಮತ್ತು ಹಿರಿಯ ಅಧಿಕಾರಿಗಳ ವಿರುದ್ಧ ಶಾಸನಬದ್ಧ ಕರ್ತವ್ಯಗಳ ಉಲ್ಲಂಘನೆ ಆರೋಪದ ಕುರಿತು ತನಿಖೆ ನಡೆಸುವಂತೆ ಕೋರಿ ಮೊದಲ ಅರ್ಜಿ ಸಲ್ಲಿಸಿದ್ದರು.

ಕಳೆದ ಕೆಲವು ತಿಂಗಳುಗಳಲ್ಲಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸುವಿಕೆಗೆ ಸಂಬಂಧಿಸಿದಂತೆ ಸಹ ಚುನಾವಣಾ ಆಯುಕ್ತರು ಸುಮಾರು 14 ಬಾರಿ ತಮ್ಮ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದರು ಎಂದು ಮಾಧ್ಯಮ ವರದಿಗಳು ತಿಳಿಸಿದ್ದವು. ಇದು ದೇಶದ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಚುನಾವಣಾ ಆಯೋಗದ ಸ್ಪಷ್ಟನೆ ಈ ಆರೋಪಗಳನ್ನು ತಳ್ಳಿಹಾಕಿರುವ ಚುನಾವಣಾ ಆಯೋಗವು, ಯಾವುದೇ ಸಾಂವಿಧಾನಿಕ ಸಂಸ್ಥೆಯಲ್ಲಿ ವಿಭಿನ್ನ ದೃಷ್ಟಿಕೋನಗಳು ಮತ್ತು ಚರ್ಚೆಗಳು ಸಹಜ ಪ್ರಕ್ರಿಯೆಯಾಗಿವೆ ಎಂದು ಹೇಳಿದೆ. ಕಳೆದ ಒಂದು ವರ್ಷದಲ್ಲಿ ಕೈಗೊಂಡ ಎಲ್ಲ ನಿರ್ಧಾರಗಳು ಪೂರ್ಣ ಆಯೋಗದ ಸರ್ವಾನುಮತದ ಒಪ್ಪಿಗೆಯೊಂದಿಗೆ ನಡೆದಿವೆ ಎಂದು ಚುನಾವಣಾ ಆಯೋಗ ಪ್ರತಿಪಾದಿಸಿದೆ.

## ದಸರಾದ ಪ್ರಮುಖ ಆಕರ್ಷಣೆಗಳಲ್ಲೊಂದಾದ 'ಯುವ ಸಂಭ್ರಮ'ಕ್ಕೆ ಇಂದು ಚಾಲನೆ

ಅ.ಶ. ಸುದ್ದಿ ಮೈಸೂರು

**ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯವಾದ ಯುವ ಸಂಭ್ರಮ ಕಾರ್ಯಕ್ರಮಕ್ಕೆ ಇಂದು ಸಂಜೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಚಾಲನೆ ನೀಡಲಿದ್ದಾರೆ. ನಗರದ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಇಂದಿನಿಂದ ಎಂಟು ದಿನಗಳ ಕಾಲ ನಡೆಯುವ ಯುವ ಸಂಭ್ರಮಕ್ಕೆ ಸಂಜೆ 5 ಗಂಟೆಗೆ ಸಚಿವರು ಹಸಿರು ನಿಶಾನೆ ತೋರಲಿದ್ದಾರೆ.**




ನಾಡಿನ ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿದ್ದು, ಪ್ರತಿ ದಿನ ಸಂಜೆ ನೃತ್ಯ, ಸಂಗೀತ, ನಾಟಕ ಸೇ-ರಿದಂತೆ ವಿವಿಧ ಕಲಾ ಪ್ರದರ್ಶನಗಳು ನಡೆಯಲಿವೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಸ್ಯಾಂಡಲ್‌ವುಡ್‌ನ ನಟ-ನಟಿಯರು, ಹಿನ್ನಲೆ ಗಾಯಕರು ಭಾಗವಹಿಸಲಿದ್ದಾರೆ. ಯುವ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ದಸರಾ ಉತ್ಸವ ಸಮಿತಿ ಪ್ರತೀ ವರ್ಷ ಯುವ ದಸರಾ ಸಂಭ್ರಮವನ್ನು ಆಯೋಜಿಸುತ್ತಿದ್ದು, ಈ ಬಾರಿಯೂ ಸಹ ಅದರಂತೆ ಕಾರ್ಯಕ್ರಮ ಆಯೋಜಿಸಿದ್ದು, ಹೆಚ್ಚಿನ ಮೆರುಗು ದೊರೆಯಲಿದೆ.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಜಿಲ್ಲೆಯ ರೈತ ಉತ್ಪಾದಕ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮ: ಆನ್‌ಲೈನ್ ವಹಿವಾಟಿಗೆ ತಾಂತ್ರಿಕ ಪ್ರೋತ್ಸಾಹ



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜಿಲ್ಲೆಯ ಗಂಗಾವತಿ ಸಮೀಪದ ವಡ್ಡರಹಟ್ಟಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಸೋಮವಾರದಂದು ಜಿಲ್ಲೆಯ ರೈತ ಉತ್ಪಾದಕ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮ ಮೂಲಕ ಆನ್‌ಲೈನ್ ವಹಿವಾಟಿಗೆ ತಾಂತ್ರಿಕ ಪ್ರೋತ್ಸಾಹ ನೀಡಲಾಯಿತು.**

ಸಿಐಇ-ಎಫ್.ಪಿ.ಓ ಸಂಸ್ಥೆಯ ವತಿಯಿಂದ ಕೊಪ್ಪಳ ಜಿಲ್ಲೆಯ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ರೈತ ಉತ್ಪಾದಕರ ಸಂಸ್ಥೆಗಳಿಗೆ ಆಯೋಜಿಸಲಾಗಿದ 'ರಾಷ್ಟ್ರೀಯ ಇ-ಮಾರುಕಟ್ಟೆ ಸೇವೆಗಳು' (ReMS) ಕುರಿತ ವಿಶೇಷ ತರಬೇತಿ ಕಾರ್ಯಕ್ರಮವನ್ನು ಕೊಪ್ಪಳದ ಉಪಕೃಷಿ ನಿರ್ದೇಶಕರಾದ ಎಲ್.ಸಿದ್ದೇಶ್ವರ ಅವರು ಉದ್ಘಾಟಿಸಿ ಮಾತನಾಡಿ, ರೈತ ಉತ್ಪಾದಕ ಸಂಸ್ಥೆಗಳು ಆಧುನಿಕ ತಂತ್ರಜ್ಞಾನ ಮತ್ತು ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲೀಕರಣಗೊಳ್ಳಬೇಕು ಎಂದು ಕರೆ ನೀಡಿದರು.

ತರಬೇತಿಯ ಮುಖ್ಯ ಉದ್ದೇಶ: ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಎಲ್ಲಾ ಎಫ್‌ಪಿಒಗಳು ಖಜಒಖ (ರಾಷ್ಟ್ರೀಯ ಇ-ಮಾರ್ಕೆಟ್ ಸರ್ವಿಸ್) ವೇದಿಕೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವುದು ಮತ್ತು ಆ ವೇದಿಕೆಯ ಮೂಲಕವೇ ಪಾರದರ್ಶಕ ವ್ಯಾಪಾರ ವಹಿವಾಟು ನಡೆಸಲು ಅಗತ್ಯವಾದ ತಾಂತ್ರಿಕ ಜ್ಞಾನ ಹಾಗೂ ಬೆಂಬಲ ನೀಡುವುದು ಈ ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿ-ತ್ತು. ವೇದಿಕೆಯಲ್ಲಿ ನೋಂದಣಿ ಮಾಡಿಕೊಳ್ಳುವ ವಿಧಾನ ಹಾಗೂ ಆನ್‌ಲೈನ್ ವಹಿವಾಟು ನಡೆಸುವ ಪ್ರಕ್ರಿಯೆಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಎಫ್‌ಪಿಒ ಪ್ರತಿನಿಧಿಗಳಿಗೆ ಮನದಟ್ಟು ಮಾಡಲಾಯಿತು.

ಕಾರ್ಯಾಗಾರದಲ್ಲಿ ವಿವಿಧ ಇಲಾಖೆಗಳಿಂದ ಆಗಮಿಸಿದ್ದ ಅಧಿಕಾರಿಗಳು ತಮ್ಮ ಇಲಾಖೆಗಳ ವತಿಯಿಂದ ಜಾರಿಯಲ್ಲಿರುವ ರೈತಪರ ಯೋಜನೆಗಳು ಹಾಗೂ ಸಿಗುವ ಸೌಲಭ್ಯಗಳ ಕುರಿತು ರೈತ ಉತ್ಪಾದಕ ಸಂಸ್ಥೆಯ ಪದಾಧಿಕಾರಿಗಳಿಗೆ ಸಮಗ್ರ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಶಿವರಾಜ ಶೆಟ್ಟರ್, ಗಂಗಾವತಿಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಯೋಗೇಶ್ವರ, ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರಾದ ಆನಂದ,

ಬೆಂಗಳೂರಿನ ಜಿಕೆವಿಕೆ ಸೆಂಟರ್ ಆಫ್ ಎಕ್ಸಲೆನ್ಸ್‌ನ ಹಿರಿಯ ಸಲಹೆಗಾರರಾದ ಜಯಣ್ಣ, ಬೆಂಗಳೂರಿನ ರಾಷ್ಟ್ರೀಯ ಇ-ಮಾರ್ಕೆಟ್ ಸರ್ವಿಸ್ ಸಹಾಯಕ ವ್ಯವಸ್ಥಾಪಕರಾದ ಶ್ರೀಶೈಲ್, ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘದ (ನಿ.) ನಿರ್ದೇಶಕರಾದ ಕೆ. ಶಿವರಾಮ, ಎನ್.ಸಿ.ಡಿ.ಸಿ ಸಂಯೋಜಕರಾದ ಯಲ್ಲಪ್ಪ, ಕೊಪ್ಪಳ ಎಪಿಎಂಸಿ ಸಹಾಯಕ ನಿರ್ದೇಶಕರಾದ ವೀರಭದ್ರಯ್ಯ ಹಿರೇಮಠ ಹಾಗೂ ನಬಾರ್ಡ್ ಡಿಡಿಎಂ ಎಮ್.ಎಮ್. ಕೀರ್ತಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

## ಸರ್ವ ಧರ್ಮಗಳ ಹೊಂದಾಣಿಕೆಯಿಂದ ಸಾಯಿಬಾಬಾ ಹುಟ್ಟುಹಬ್ಬ ಆಚರಣೆ

### ಭಕ್ತ ಸಮೂಹದ ಸಮ್ಮುಖದಲ್ಲಿ ಕೇಕ್ ಕತ್ತರಿಸಿ ಸಂಭ್ರಮ; ಪ್ರಸಾದ ಸೇವೆ



ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣದ ಗವಿಶ್ರೀ ನಗರದಲ್ಲಿರುವ ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್ ವತಿಯಿಂದ ಶ್ರೀ ಶಿರಡಿ ಸಾಯಿಬಾಬಾ ಅವರ 191ನೇ ಹುಟ್ಟುಹಬ್ಬವನ್ನು ಸರ್ವ ಧರ್ಮಗಳ ಹೊಂದಾಣಿಕೆ ಹಾಗೂ ಭಕ್ತಿಭಾವದೊಂದಿಗೆ ವಿವಿಧ ಧಾರ್ಮಿಕ ಮತ್ತು ಸೇವಾ ಕಾರ್ಯಕ್ರಮಗಳ ಮೂಲಕ ಆಚರಿಸಲಾಯಿತು.**

ಹುಟ್ಟುಹಬ್ಬದ ಅಂಗವಾಗಿ ಬೆಳಗ್ಗಿನಿಂದಲೇ ಶ್ರೀ ಸಾಯಿಬಾಬಾ ಅವರಿಗೆ ಕಾಕಡ ಆರತಿ, ಅಭಿಷೇಕ, ವಿಶೇಷ ಪೂಜೆ ಸೇ-ರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬಳಿಕ ಭಕ್ತ ಸಮೂಹದ ಸಮ್ಮುಖದಲ್ಲಿ ಕೇಕ್ ಕತ್ತರಿಸುವ ಮೂಲಕ ಸಾಯಿಬಾಬಾ ಅವರ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಪಟ್ಟಣದ ಹಿರಿಯರಾದ ಅಂದಪ್ಪ ಜವಳಿ, ಶ್ರೀ ಶಿರಡಿ ಸಾಯಿಬಾಬಾ ಅವರು ಸರ್ವ ಧರ್ಮಗಳ ಸಮನ್ವಯ, ಪ್ರೀತಿ, ಮಾನವೀಯತೆ ಹಾಗೂ ಸೇವೆಯ ಸಂದೇಶವನ್ನು ಸಾರಿದ್ದಾರೆ.

ಸಾಯಿಬಾಬಾ ಅವರ ತತ್ವಾದರ್ಶಗಳನ್ನು ಪಾಲಿಸುವ ಮೂಲಕ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹೋದರತ್ವವನ್ನು ಬೆಳೆಸಬಹುದು ಎಂದರು. ಸರ್ವ ಧರ್ಮಗಳ ಹೊಂದಾಣಿಕೆ ಹಾಗೂ ಪರಸ್ಪರ ಸಹಕಾರದಿಂದಲೇ ಇಂತಹ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಲು ಸಾಧ್ಯ. ಸಾಯಿಬಾಬಾ ಅವರು ಸಾರಿದ ಮಾನವೀಯತೆಯ ಸಂದೇಶವನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಂದಪ್ಪ ಜವಳಿ ಹೇಳಿದರು.

ಹುಟ್ಟುಹಬ್ಬದ ಅಂಗವಾಗಿ ಭಕ್ತರು ಹಾಗೂ ಸಾರ್ವಜನಿಕರಿಗೆ ಪ್ರಸಾದ ಸೇವೆ ಏರ್ಪಡಿಸಲಾಗಿತ್ತು. ವಿವಿಧ ಧರ್ಮಗಳ ಭಕ್ತರು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್‌ನ ಪದಾಧಿಕಾರಿಗಳು, ಸದಸ್ಯರು, ಸಾಯಿ ಭಕ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಕಾರ್ಯಕ್ರಮವು ಭಕ್ತಿ, ಸೌಹಾರ್ದತೆ ಮತ್ತು ಸಂಭ್ರಮದ ವಾತಾವರಣದಲ್ಲಿ ನೆರವೇರಿತು.

## ಕೃಷಿ ಮೇಳದಲ್ಲಿ ಸ್ವಾವಲಂಬನೆ ಕೃಷಿ ಮೌಲ್ಯ ವರ್ಧನೆ ಹಾಗೂ ಉದ್ಯಮಶೀಲತೆ ವಿಚಾರ ಗೋಷ್ಠಿ ಮೇಲೆ ಉಪನ್ಯಾಸ

ಅ.ಶ. ಸುದ್ದಿ ಇಂಡಿ

**ಇಂಡಿ: ತಾಲೂಕಿನ ಚೋರಗಿ ಗ್ರಾಮದ ಪ್ರಗತಿಪರ ಮಹಿಳೆ ಭಾರತಿ ಮೆಂಡೆಗಾರ ಇವರು ಕೃಷಿ ವಿವಿ ಧಾರವಾಡದಿಂದ ಆಯೋಜಿಸಿದ ಕೃಷಿ ಮೇಳ ಕಾರ್ಯಕ್ರಮದಲ್ಲಿ ಆಯೋಜಿಸಿದ್ದ ತಾಂತ್ರಿಕ ವಿಚಾರಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.**

ಮತ್ತು ಸ್ವಾವಲಂಬನೆ ಕೃಷಿ ಮೌಲ್ಯ ವರ್ಧನೆ ಹಾಗೂ



ಉದ್ಯಮಶೀಲತೆ ವಿಚಾರ ಗೋಷ್ಠಿ ಮೇಲೆ ಉಪನ್ಯಾಸ ನೀಡಿದ್ದಾರೆ. ರೈತರಿಂದ ರೈತರಿಗಾಗಿ ಕಾರ್ಯಕ್ರಮವನ್ನು ಧಾರವಾಡದ ಕೃಷಿಮೇಳದಲ್ಲಿ ಸೆ 27 ರಂದು ಮಧ್ಯಾನ್ಹ 3 ಗಂಟೆಗೆ ಕಾರ್ಯಕ್ರಮ ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ನಡೆದಿತ್ತು. ಶಿವಮೊಗ್ಗಾದ ಕೃಷಿ ತೋಟಗಾರಿಕೆ ವಿವಿ ಕುಲಪತಿಗಳು ಡಾ. ಎಮ್.ವಿ.ಧನಂಜಯ ಧಾರವಾಡದ ಕೃಷಿ ವಿವಿ ಕುಲಪತಿ ಡಾ.ಎನ್ ಬಿ ಪ್ರಕಾಶ ಅಧ್ಯಕ್ಷತೆ ವಹಿಸಿದ್ದರು.

# ಕನಕಗಿರಿ ವಿದ್ಯಾರ್ಥಿಗಳ ಬಸ್ ಸಂಕಷ್ಟಕ್ಕೆ: ಜೀವದ ಜೊತೆ ಚೆಲ್ಲಾಟ ಅಧಿಕಾರಿಗಳ ಮೌನಕ್ಕೆ ಆಕ್ರೋಶ




ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಕೊಪ್ಪಳ ಜಿಲ್ಲೆಯ ಕನಕಗಿರಿ ಪಟ್ಟಣದಲ್ಲಿ ಬಸ್ ಸಾರಿಗೆ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಶಾಲಾ-ಕಾಲೇಜು ಸಮಯಕ್ಕೆ ಸರಿಯಾಗಿ ಬಸ್ಸುಗಳು ಲಭ್ಯವಿಲ್ಲದ ಕಾರಣ, ವಿದ್ಯಾರ್ಥಿಗಳು ಅನಿವಾರ್ಯವಾಗಿ ಜೀವದ ಹಂಗು ತೊರೆದು ತುಂಬಿದ ಬಸ್ಸಿಗೆ ಜೋತು ಬಿದ್ದು ಪ್ರಯಾಣಿಸುವ** ದೃಶ್ಯಗಳು ಪ್ರತಿದಿನ ಸಾಮಾನ್ಯವಾಗಿದೆ.

ಇಂದು ಕನಕಗಿರಿ ಪೊಲೀಸ್ ಠಾಣೆಯ ಮುಂಭಾಗವಿರುವ ವಾಲ್ಮೀಕಿ ಸರ್ಕಲ್ ಮಿನಿ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾದು ನಿಂತಿದ್ದ ಸುಮಾರು ವಿದ್ಯಾರ್ಥಿಗಳಿಗೆ ಬಸ್ಸಿನಲ್ಲಿ ನಿಲ್ಲಲು ಕೂಡ ಜಾಗವಿರಲಿಲ್ಲ. ಇದರಿಂದ ಕುಪಿತಗೊಂಡ ವಿದ್ಯಾರ್ಥಿಗಳು, ಶಾಲಾ ಅವಧಿಗೆ ತಡವಾಗಬಾರದೆಂದು ಬಸ್ಸಿನ ಹಿಂಭಾಗ ಮತ್ತು ಬಾಗಿಲಿಗೆ ಜೋತು ಬಿದ್ದು ಪ್ರಯಾಣ ಆರಂಭಿಸಿದರು. ?ಈ ದೃಶ್ಯವನ್ನು ಕಂಡ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದು, ಜಿಲ್ಲಾಡಳಿತ ಮತ್ತು ಕೆಎಸ್‌ಆರ್‌ಟಿಸಿ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಕಿಡಿಕಾರಿದ್ದಾರೆ.

ಬಸ್ಸುಗಳ ಕೊರತೆ ಇರುವ ಬಗ್ಗೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದ್ದಾರೆ. "ಸರ್ಕಾರಕ್ಕೆ ಆಡಳಿತ ಮುಖ್ಯವೋ ಅಥವಾ ಸಾರ್ವಜನಿಕರ ಸುರಕ್ಷತೆ ಮುಖ್ಯವೋ?" ಎಂದು ಪ್ರಶ್ನಿಸಿರುವ ಸ್ಥಳೀಯರು, "ವಿದ್ಯಾರ್ಥಿಗಳಿಗೆ ಶಿಕ್ಷಣ ಮುಖ್ಯವೋ ಅಥವಾ ಪ್ರಾಣ ಮುಖ್ಯವೋ?" ಎಂದು ಆಕ್ರೋಶ ಹೊರಹಾಕಿದ್ದಾರೆ. ?ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು, ಕನಕಗಿರಿ ಭಾಗಕ್ಕೆ ಹೆಚ್ಚಿನ ಬಸ್ಸುಗಳನ್ನು ನಿಯೋಜಿಸಬೇಕು ಮತ್ತು ವಿದ್ಯಾರ್ಥಿಗಳ ಪ್ರಾಣವನ್ನು ರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಇಲ್ಲದಿದ್ದರೆ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ.

# ವಿಜಯಪುರ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ವೇಗ: ವಿಠ್ಠಲ ಕಟಕಧೋಂಡ

## ಸ್ಮಾರಕಗಳ ಸಂರಕ್ಷಣೆ, ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ

ಅ.ಶ. ಸುದ್ದಿ ವಿಜಯಪುರ

ವಿಜಯಪುರ: ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಪ್ರವಾಸಿ ತಾಣಗಳ ಅಭಿವೃದ್ಧಿ ಹಾಗೂ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಮೂಲಕ ಪ್ರವಾಸೋದ್ಯಮಕ್ಕೆ ಮತ್ತಷ್ಟು ಉತ್ತೇಜನ ನೀಡಲಾಗುವುದು ಎಂದು ನಾಗಠಾಣ ಕ್ಷೇತ್ರದ ಶಾಸಕರಾದ ವಿಠ್ಠಲ ಕಟಕಧೋಂಡ ಹೇಳಿದರು. ನಗರದ ಇಬ್ರಾಹಿಂ ರೋಜಾ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ರವಿವಾರ ಆಯೋಜಿಸಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಜಯಪುರವು ವಿಶ್ವವಿಖ್ಯಾತ ಗೋಳಗುಮ್ಮಟ ಸೇರಿದಂತೆ ಅಪರೂಪದ ಕಲೆ, ವಾಸ್ತುಶಿಲ್ಪ ಹಾಗೂ ಐತಿಹಾಸಿಕ ಸ್ಮಾರಕಗಳ ಶ್ರೀಮಂತ ಪರಂಪರೆ ಹೊಂದಿದೆ. ಇವುಗಳ ಇತಿಹಾಸ ಮತ್ತು ಮಹತ್ವವನ್ನು ವಿದ್ಯಾರ್ಥಿಗಳು ಹಾಗೂ ಯುವಜನರಿಗೆ ಪರಿಚಯಿಸುವ ಮೂಲಕ ಸ್ಮಾರಕಗಳ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಬೇಕು.




ಪ್ರವಾಸಿ ತಾಣಗಳ ಮಾಹಿತಿ ಸುಲಭವಾಗಿ ದೊರೆಯುವಂತೆ ಮಾಡುವ ಮೂಲಕ ದೇಶ-ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸಬೇಕು ಎಂದರು. ಪ್ರವಾಸೋದ್ಯಮ ಅಭಿವೃದ್ಧಿಯಿಂದ ಸ್ಥಳೀಯ ವ್ಯಾಪಾರ, ಸಾರಿಗೆ, ಹೋಟೆಲ್‌ಗಳು, ಪ್ರವಾಸಿ ಮಾರ್ಗದರ್ಶಕರು ಹಾಗೂ ಸಣ್ಣ ಉದ್ಯಮಗಳಿಗೆ ಹೆಚ್ಚಿನ ಅವಕಾಶಗಳು ಸಿಗಲಿವೆ.

ಇದರಿಂದ ಯುವಜನರಿಗೆ ಉದ್ಯೋಗ ಮತ್ತು ಸ್ವಉದ್ಯೋಗದ ಅವಕಾಶಗಳು ಹೆಚ್ಚಾಗಿ ಜಿಲ್ಲೆಯ ಆರ್ಥಿಕ ಚಟುವಟಿಕೆಗಳಿಗೆ ವೇಗ ದೊರೆಯಲಿದೆ ಎಂದು ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಅವರ ದೂರದೃಷ್ಟಿಯ ಕಾಳಜಿಯಿಂದ ನಿರ್ಮಾಣಗೊಂಡ ನೀರಾವರಿ ಕಾಲುವೆಗಳ ಪರಿಣಾಮ ಬರಗಾಲದ ಸಂದರ್ಭದಲ್ಲೂ ಜಿಲ್ಲೆಗೆ ನೀರಿನ ಲಭ್ಯತೆ ದೊರೆಯುತ್ತಿದೆ. ನೀರಾವರಿ ಕ್ಷೇತ್ರದ ಅಭಿವೃದ್ಧಿಗೆ ಅವರು ನೀಡಿರುವ ಕೊಡುಗೆ ಶ್ಲಾಘನೀಯ ಎಂದು ಹೇಳಿದರು.

ವಿಜಯಪುರ ಉಪ ವಿಭಾಗಾಧಿಕಾರಿ ಜುಫಿಶಾನ್ ಹಕ್ ಮಾತನಾಡಿ, ಬಾಲ್ಯದಲ್ಲಿ ವಿಜಯಪುರ ಎಂದರೆ ಗೋಳಗುಮ್ಮಟ ನೆನಪಾಗುತ್ತಿತ್ತು. ಆದರೆ ಜಿಲ್ಲೆಯಲ್ಲಿ ಗೋಳಗುಮ್ಮಟ ಸೇರಿದಂತೆ ಸಾವಿರಾರು ಐತಿಹಾಸಿಕ ಸ್ಮಾರಕಗಳಿದ್ದು, ಅವುಗಳ ಪರಿಚಯವನ್ನು ಹೆಚ್ಚಿನ ಜನರಿಗೆ ಮಾಡಿಸುವ ಅಗತ್ಯವಿದೆ, ವಿದ್ಯಾರ್ಥಿಗಳು ವಿನ್ಯಾಸಗೊಳಿಸಿರುವ ಪ್ರವಾಸೋದ್ಯಮ ಆ?ಯಪ್ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ಜಿಲ್ಲೆಯ ಪ್ರವಾಸಿ ತಾಣಗಳು, ಹೋಟೆಲ್‌ಗಳು ಸೇರಿದಂತೆ ಪ್ರವಾಸಿಗರಿಗೆ ಅಗತ್ಯವಿರುವ ವಿವಿಧ ಮಾಹಿತಿಗಳನ್ನು ಒದಗಿಸಲಾಗಿದೆ. ತಂತ್ರಜ್ಞಾನದ ಬಳಕೆಯ ಮೂಲಕ ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವ ಇಂತಹ ಪ್ರಯತ್ನಗಳು ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಲಿವೆ ಎಂದು ಹೇಳಿದರು. ಭಾರತೀಯ ಪುರಾತತ್ವ ಇಲಾಖೆಯ ಸಹಾಯಕ ಸಂರಕ್ಷಣಾಧಿಕಾರಿ ವಿಜಯಕುಮಾರ ಮಾತನಾಡಿ, ವಿಜಯಪುರ ಜಿಲ್ಲೆ ಸಂಪದ್ಭರಿತ ಪ್ರವಾಸಿ ತಾಣಗಳನ್ನು ಹೊಂದಿದೆ.

ಇಲ್ಲಿನ ಕಲೆ, ವಾಸ್ತುಶಿಲ್ಪ ಹಾಗೂ ಐತಿಹಾಸಿಕ ಪರಂಪರೆಯ ಕುರಿತು ಯುವಜನರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಅರಿವು ಬೆಳೆಸಿಕೊಂಡು ಸ್ಮಾರಕಗಳ ಸಂರಕ್ಷಣೆಗೆ ಸಹಕರಿಸಬೇಕು ಎಂದರು. ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಸುಮಂಗಲಾ ಬಿರಾದಾರ ಡಿಜಿಟಲ್ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ (ಎಐ) ಬಳಕೆಯ ಮೂಲಕ ಪ್ರವಾಸಿಗರಲ್ಲಿ ಆಸಕ್ತಿ ಮೂಡಿಸಿ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಬಹುದು.ಜಿಲ್ಲಾಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಹೊನಮೋಡೆ ಇದ್ದರು. ಪ್ರವಾಸಿಗರಿಗೆ ತ್ವರಿತವಾಗಿ ಮಾಹಿತಿ ಹಾಗೂ ಮಾರ್ಗದರ್ಶನ ಒದಗಿಸಲು ಎಐ ಆಧಾರಿತ ಸೇವೆಗಳನ್ನು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

## ವಿಶ್ವರೇಬಿಸ್ ದಿನಾಚರಣೆ: ಒಂದು ತಿಂಗಳ ಲಸಿಕೆ ಅಭಿಯಾನಕ್ಕೆ ಚಾಲನೆ




ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ವಿಶ್ವ ರೇಬಿಸ್ ದಿನಾಚರಣೆ ಅಂಗವಾಗಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಜಿಲ್ಲಾ ಪಾಲಿಕ್ಲಿನಿಕ್, ಕೊಪ್ಪಳ ವತಿಯಿಂದ ನಾಯಿ ಮತ್ತು ಬೆಕ್ಕುಗಳಿಗೆ ಉಚಿತ ರೇಬಿಸ್ ಲಸಿಕಾ ಕಾರ್ಯಕ್ರಮವನ್ನು ಸೋಮವಾರದಂದು ಹಮ್ಮಿಕೊಳ್ಳಲಾಗಿತ್ತು.

ಕಲಬುರಗಿ ವಿಭಾಗದ ರಾಯಚೂರಿನ ಜಂಟಿ ನಿರ್ದೇಶಕರಾದ ಡಾ. ರಮೇಶದೊಡ್ಡಮನಿ ಅವರು ನಾಯಿ ಮತ್ತು ಬೆಕ್ಕುಗಳಿಗೆ ರೇಬಿಸ್‌ನಿರೋಧಕ ಲಸಿಕೆಯನ್ನು ಹಾಕುವುದರ ಮೂಲಕಲಸಿಕಾ ಅಭಿಯಾನವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಡಾ. ಎಸ್. ಜಿ. ರೋಣ, ಉಪನಿರ್ದೇಶಕರು, ಜಿಲ್ಲಾ ಪಾಲಿಕ್ಲಿನಿಕ್, ಕೊಪ್ಪಳ, ಡಾ. ಚಂದ್ರಶೇಖರ ಜಿ. ಹಾಗೂ ಡಾ. ಯಮನಪ್ಪ ಬಿ. ಎಚ್., ಮುಖ್ಯ ಪಶು ವೈದ್ಯಾಧಿಕಾರಿಗಳು ಮತ್ತು ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಈ ಲಸಿಕಾ ಕಾರ್ಯಕ್ರಮವು ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 27 ರವರೆಗೆ ನಡೆಯಲಿದ್ದು, ಉಚಿತವಾಗಿ ಲಸಿಕೆಯನ್ನು ಹಾಕಲಾಗುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08539-299906 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

### ಗಂಗಾವತಿ: ಪೊಲೀಸ್ ಠಾಣೆಗಳಿಗೆ 10 ವರ್ಷಗಳಿಂದ ಉಚಿತ ಶುದ್ಧ ಕುಡಿಯುವ ನೀರು ಪೂರೈಸುತ್ತಿರುವ ವಿರೂಪಾಕ್ಷ ಪಾಟೀಲ್

ಅ.ಶ. ಸುದ್ದಿ ಗಂಗಾವತಿ

ಗಂಗಾವತಿ: ನಗರದ ವಿರೂಪಾಕ್ಷ ಪಾಟೀಲ್ ಅವರು ಗಂಗಾವತಿ ನಗರ, ಸಂಚಾರಿ ಹಾಗೂ ಗ್ರಾಮೀಣ ಪೊಲೀಸ್ ಠಾಣೆಗಳಿಗೆ ಕಳೆದ 10 ವರ್ಷಗಳಿಂದ ಉಚಿತವಾಗಿ ಶುದ್ಧ ಕುಡಿಯುವ ನೀರು ಪೂರೈಸುವ ಮೂಲಕ ಸಮಾಜಮುಖಿ ಸೇವೆ ಸಲ್ಲಿಸುತ್ತಿದ್ದಾರೆ.



ಪೊಲೀಸ್ ಸಿಬ್ಬಂದಿ ಹಾಗೂ ಠಾಣೆಗಳಿಗೆ ಆಗಮಿಸುವ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಪ್ರತಿ 25 ಲೀಟರ್‌ನ ಶುದ್ಧ ಕುಡಿಯುವ ನೀರಿನ ಕ್ಯಾನ್‌ಗಳನ್ನು ಯಾವುದೇ ಶುಲ್ಕವಿಲ್ಲದೆ ನಿಯಮಿತವಾಗಿ ಪೂರೈಸುತ್ತಿದ್ದಾರೆ.

ಕಳೆದ ಒಂದು ದಶಕದಿಂದ ನಿರಂತರವಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ವಿರೂಪಾಕ್ಷ ಪಾಟೀಲ್ ಅವರ ಕಾರ್ಯಕ್ಕೆ ಪೊಲೀಸ್ ಇಲಾಖೆ ಹಾಗೂ

## ಭಗತ್ ಸಿಂಗ್ ಅವರ ದೇಶಪ್ರೇಮ, ತ್ಯಾಗ ಯುವಜನತೆಗೆ ಆದರ್ಶ: ಹೊನ್ನಯ್ಯ ಕೊಂಕಲ್

ಅ.ಶ. ಸುದ್ದಿ ಯಾದಗಿರಿ

ಯಾದಗೀರಿ: ಜಿಲ್ಲೆಯ ವಡಗೇರ ತಾಲೂಕಿನ ಡಿ.ಡಿ.ಯು. ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಕ್ರಾಂತಿಕಾರಿ ಹೋರಾಟಗಾರ ಭಗತ್ ಸಿಂಗ್ ಅವರ ಜನ್ಮದಿನಾಚರಣೆ ನಡೆಯಿತು. ಕಾರ್ಯಕ್ರಮದಲ್ಲಿ ಉಪನ್ಯಾಸಕ ಅಂಬರೀಶ್ ರಾಠೋಡ್ ಮಾತನಾಡಿ, ಭಗತ್ ಸಿಂಗ್ ಅವರ ದೇಶಪ್ರೇಮ, ಧೈರ್ಯ ಮತ್ತು ತ್ಯಾಗದ ಮನೋಭಾವ ಇಂದಿನ ಯುವಜನತೆಗೆ ಪ್ರೇರಣಾದಾಯಕವಾಗಿದೆ ಎಂದು ಹೇಳಿದರು.

ಅಲ್ಪ ವಯಸ್ಸಿನಲ್ಲಿಯೇ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ



ತೊಡಗಿಸಿಕೊಂಡ ಅವರು ತಮ್ಮ ಚಿಂತನೆ, ಹೋರಾಟ ಮತ್ತು ತ್ಯಾಗದ ಮೂಲಕ ಭಾರತೀಯ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಹೊನ್ನಯ್ಯ ಕೊಂಕಲ್ ಮಾತನಾಡಿ, "ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ವಿವಿಧ ಧಾರೆಗಳ ಹೋರಾಟಗಾರರು ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡಿದ್ದಾರೆ. ಕ್ರಾಂತಿಕಾರಿ ಚಳವಳಿಯಲ್ಲಿ ಭಗತ್ ಸಿಂಗ್ ಪ್ರಮುಖ ವ್ಯಕ್ತಿಯಾಗಿದ್ದರು. ಅವರ ದೇಶಪ್ರೇಮ, ತ್ಯಾಗ ಮತ್ತು ಸಾಮಾಜಿಕ ಚಿಂತನೆಗಳನ್ನು ಯುವಜನತೆ ಅಧ್ಯಯನ ಮಾಡಿ, ಸಂವಿಧಾನಾತ್ಮಕ ಮೌಲ್ಯಗಳು ಹಾಗೂ ಜವಾಬ್ದಾರಿಯುತ ನಾಗರಿಕತ್ವದ ಮನೋಭಾವ ಬೆಳೆಸಿಕೊಳ್ಳಬೇಕು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರಾರ್ಥನೆ ಸಲ್ಲಿಸಿದರು. ಉಪನ್ಯಾಸಕ ನರಸಪ್ಪ ಪತ್ತಾರ ಕಾರ್ಯಕ್ರಮ ನಿರೂಪಿಸಿದರು. ಆನಂದ ಗೊಬ್ಬಿ ವಂದಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಆರತಿ, ನಮ್ರತಾ, ಭವಾನಿ, ಲೋಕೇಶ್, ವೆಂಕಟೇಶ, ಹಣಮಂತ ಸೇರಿದಂತೆ ಕಾಲೇಜಿನ ಸಿಬ್ಬಂದಿ ಉಪಸ್ಥಿತರಿದ್ದರು.

### 'ವಚನಾಮೃತ'



ಬಡಿದು ಬಾಡಿಸಿ ಕೆತ್ತಿ ಕಡಿಯುವ-
ರಿಲ್ಲ ಕಪ್ಪು ಕಲ್ಲಾಗಿಹ ಎನ ಮನವೆ
ಜೊಳ್ಳಾಗಿ ನಿಂತಿಹುದು ನೋಡಾ!.
ಕಲ್ಲ ಕಡಿದು ಶಿಲೆಯಾಗಿಸಿ ಮೂರ್ತಿ
ಮಾಡಿರ್ಪ ಎನ ತಲೆಯು ಬಾಗಿಪುದು
ನಿಮ್ಮ ತಲದಡಿ ಸತ್ಯವಾಣಿ.

ವಾಣಿ ಭಂಡಾರಿ.

## ಅ.2ರಂದು ಭೂ ಮಾಪಕರ, ಅ.4ರಂದು ಗ್ರಾಮ ಆಡಳಿತಾಧಿಕಾರಿ ನೇಮಕಾತಿ ಪರೀಕ್ಷೆ: ಸುಸೂತ್ರ ನಿರ್ವಹಣೆಗೆ ಜಿಲ್ಲಾಧಿಕಾರಿ ಡಾ. ಆನಂದ ಕೆ ಸೂಚನೆ

## ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಪರೀಕ್ಷಾ ಪೂರ್ವಭಾವಿ ಸಭೆಯಲ್ಲಿ ಅಧಿಕಾರಿಗಳಿಗೆ ನಿರ್ದೇಶನ

ಅ.ಶ. ಸುದ್ದಿ ವಿಜಯಪುರ

ವಿಜಯಪುರ: ಭೂ ಮಾಪಕರು ಹಾಗೂ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ಸುಸೂತ್ರವಾಗಿ, ಶಿಸ್ತುಬದ್ಧವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಅಗತ್ಯವಿರುವ ಎಲ್ಲ ಪರೀಕ್ಷಾ ಪೂರ್ವ ಸಿದ್ಧತೆಗಳನ್ನು ಸಮರ್ಪಕವಾಗಿ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅಧಿಕಾರಿಗಳಿಗೆ ಸೂಚಿಸಿದರು. ಸೋಮವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ನಡೆದ ಪರೀಕ್ಷಾ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಕ್ಟೋಬರ್ 2ರಂದು ನಡೆಯಲಿರುವ ಭೂ ಮಾಪಕರ ಹುದ್ದೆಗಳ ನೇಮಕಾತಿ ಪರೀಕ್ಷೆಯು ಬೆಳಿಗ್ಗೆ ಹಾಗೂ ಮಧ್ಯಾಹ್ನ ಎರಡು ಪತ್ರಿಕೆಗಳಲ್ಲಿ ನಡೆಯಲಿದ್ದು, ವಿಜಯಪುರ ನಗರದ 18 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 6,956 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಅಕ್ಟೋಬರ್ 4ರಂದು ನಡೆಯಲಿರುವ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳ ನೇಮಕಾತಿ ಪರೀಕ್ಷೆಯು ವಿಜಯಪುರ ನಗರದ 49, ಕವಲಗಿ 2, ತಿಡಗುಂದಿ 1 ಹಾಗೂ ಬಬಲೇಶ್ವರದ 1 ಸೇರಿದಂತೆ ಒಟ್ಟು 53 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, 20,808 ಅಭ್ಯರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಅಭ್ಯರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಪರೀಕ್ಷಾ ನಿಯಮಗಳ ಪಾಲನೆ ಕಡ್ಡಾಯವಾಗಿದೆ. ಈ ಬಾರಿ ನಮ್ಮ ಜಿಲ್ಲೆಗೆ ಒಬ್ಬರು ಮಾಸ್ಟರ್ ಟ್ರೇನರ್ ನೇಮಕವಾಗಿದ್ದು, ಅವರು ಪರೀಕ್ಷಾ ಸಿದ್ಧತೆ ಬಗ್ಗೆ ಈಗಾಗಲೇ ತಿಳಿಸಿಕೊಟ್ಟಿದ್ದಾರೆ ಎಂದರು. ಎಲ್ಲಾ ಪರೀಕ್ಷಾ ಕೇಂದ್ರಗಳು ಪ್ರಮುಖವಾಗಿವೆ. ಪ್ರತಿ ಕೇಂದ್ರದ ಅಧೀಕ್ಷಕರ ಕಾರ್ಯ ಮುಖ್ಯ. ಪರೀಕ್ಷಾ ಮೇಲ್ವಿಚಾರಕರಿಗೆ ಪೂರ್ವ ತರಬೇತಿ ಅಗತ್ಯವಾಗಿದೆ.

ಇದೇ ಮೊದಲ ಬಾರಿಗೆ ಹಿರಿಯ ಅಧಿಕಾರಿಗಳನ್ನು ಫ್ಲೈಯಿಂಗ್ ಸ್ಕ್ವಾಡ್ ಆಗಿ



ನೇಮಕ ಮಾಡಲಾಗಿದೆ. ಪ್ರತಿ ಕೇಂದ್ರದಲ್ಲೂ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಿದೆ. ಯಾವುದೇ ಅಹಿತಕರ ಘಟನೆಯಾಗದಂತೆ ನೋಡಿಕೊಳ್ಳಬೇಕು. ನಗರ ವ್ಯಾಪ್ತಿಯಲ್ಲಿ ಎಲ್ಲ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಲಾಗಿದೆ. ಪ್ರಶ್ನೆಪತ್ರಿಕೆಗಳನ್ನು ನಿಗದಿತ ಅವಧಿಯಲ್ಲಿ ತಲುಪಿಸಲು ಕ್ರಮ ಕೈಗೊಳ್ಳಬೇಕಿದೆ ಎಂದರು. ಪರೀಕ್ಷೆಗೆ ಸಂಬಂಧಿಸಿದಂತೆ ತಮ್ಮ ಕೇಂದ್ರಕ್ಕೆ ಬಂದಿರುವ ಗೌಪ್ಯ ಸಾಮಗ್ರಿಗಳನ್ನು ಪರಿಶೀಲಿಸಬೇಕು. ಪ ಪರೀಕ್ಷೆ ಆರಂಭಕ್ಕೆ ಮುನ್ನವೇ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳಬೇಕು. ಯಾವುದೇ ಗೊಂದಲಗಳಾಗದಂತೆ ಸಂಪೂರ್ಣ ಜಾಗೃತೆಯಿಂದ ನೋಡಿಕೊಳ್ಳಬೇಕು. ತನ್ಮೂಲಕ ಪಾರದರ್ಶಕ ಪರೀಕ್ಷೆ ನಡೆಯುವ ನಿಟ್ಟಿನಲ್ಲಿ ನೀವೆಲ್ಲ ಎಚ್ಚರಿಕೆ ವಹಿಸಬೇಕು ಎಂದು ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.

ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಪರೀಕ್ಷಾ ವಿಶೇಷ ಕಾಯ್ದೆ ರೂಪಿಸಿದ್ದು ಇದೆ. ಪರೀಕ್ಷೆಗೆ ಸಂಬಂಧಿಸಿದಂತೆ ಯೋಜನಾ ಬದ್ದವಾಗಿ ಹಾಗೂ ಆತ್ಮವಿಶ್ವಾಸದಿಂದ ಪರೀಕ್ಷೆ ನಡೆಸಬೇಕು ಎಂದರು. ಪರೀಕ್ಷಾ ಪ್ರಕ್ರಿಯೆಯಲ್ಲಿ ಕಟ್ಟುನಿಟ್ಟಿನ ಗೌಪ್ಯತೆ ಹಾಗೂ ಭದ್ರತೆ ಕಾಯ್ದುಕೊಳ್ಳಲು ಪರೀಕ್ಷಾ ಕೇಂದ್ರಗಳ ಪ್ರವೇಶದ್ವಾರ, ಸಾಮಗ್ರಿ ಸಂಗ್ರಹಣಾ ಸ್ಥಳ ಹಾಗೂ ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಹಾಗೂ ಜಾಮರ್‌ಗಳನ್ನೂ ಅಳವಡಿಸಲಾಗುತ್ತಿದೆ. ಗೌಪ್ಯ ಸಾಮಗ್ರಿಗಳ ಸುರಕ್ಷಿತ ಸಾಗಾಣಿಕೆಗೆ ತ್ರಿ-ಸದಸ್ಯ ಮಾರ್ಗಾಧಿಕಾರಿಗಳ ತಂಡ ಹಾಗೂ ಪ್ರತಿ 4 ರಿಂದ 5 ಪರೀಕ್ಷಾ ಕೇಂದ್ರಗಳಿಗೆ ಐದು ಸದಸ್ಯರನ್ನೊಳಗೊಂಡ ಫ್ಲೈಯಿಂಗ್ ಸ್ಕ್ವಾಡ್ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು. ಆಸನ ವ್ಯವಸ್ಥೆ, ಕುಡಿಯುವ ನೀರು, ಗಾಳಿ-ಬೆಳಕು ಹಾಗೂ ನಿರಂತರ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಮುಂಚಿತವಾಗಿಯೇ ಪರಿಶೀಲಿಸಿ ಸಿದ್ಧಪಡಿಸಿಕೊಳ್ಳಬೇಕು ಎಂದು ಸೂಚಿಸಿದರು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿರುವ ಝೆರಾಕ್ಸ್ ಅಂಗಡಿಗಳನ್ನು ಮುಚ್ಚಿಸಲು ಹಾಗೂ ಪೊಲೀಸ್ ಸಿಬ್ಬಂದಿಯ ನೆರವಿನಿಂದ ಅನಗತ್ಯ ಜನದಟ್ಟಣೆ ತಡೆಯಲು ಕ್ರಮ ಕೈಗೊಳ್ಳಬೇಕು. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್, ಬ್ಲೂಟೂತ್, ವಾಚ್, ಕ್ಯಾಲ್ಕುಲೇಟರ್, ಜಿಪಿಎಸ್ ಸಾಧನ, ಪೆನ್ಸಿಲ್, ಲಾಗ್ ಟೇಬಲ್, ಮಾಸ್ಕ್ ಹಾಗೂ ಯಾವುದೇ ರೀತಿಯ ಆಹಾರ ಪದಾರ್ಥಗಳನ್ನು ತರಲು ಅವಕಾಶವಿಲ್ಲ. ಧಾರ್ಮಿಕ ಉಡುಪು ಧರಿಸುವ ಅಭ್ಯರ್ಥಿಗಳು ಎರಡು ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಆಗಮಿಸಬೇಕು.

ಪ್ರತಿ 100 ಅಭ್ಯರ್ಥಿಗಳಿಗೆ ಒಬ್ಬರಂತೆ ಹೋಮ್ ಗಾರ್ಡ್ ಹಾಗೂ ಪೊಲೀಸ್ ಸಿಬ್ಬಂದಿಯ ಸಮ್ಮುಖದಲ್ಲಿ ಕಡ್ಡಾಯ ತಪಾಸಿಸಿ ಬಳಿಕವೇ ಪರೀಕ್ಷಾ ಕೊಠಡಿಗೆ ಪ್ರವೇಶ ನೀಡಲಾಗುವುದು ಎಂದು ತಿಳಿಸಿದರು. ಪರೀಕ್ಷಾ ಕಾರ್ಯಕ್ಕೆ ನಿಯೋಜಿತ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತು ಕಾರ್ಯನಿರ್ವಹಿಸಬೇಕು. ಪರೀಕ್ಷಾ ನಿಯಮಗಳನ್ನು ಪಾಲಿಸಿಕೊಂಡು ಪರೀಕ್ಷೆ ಕಾರ್ಯನಿರ್ವಹಿಸಿ, ಪರೀಕ್ಷಾ ದಿನದಂದು ಯಾವುದೇ ಲೋಪ, ಗೊಂದಲ ಅಥವಾ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಸಂಬಂಧಿಸಿದ ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಅಭ್ಯರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ವ್ಯವಸ್ಥೆ ಕಲ್ಪಿಸಿ, ಪರೀಕ್ಷಾ ಪ್ರಕ್ರಿಯೆ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಸೂಚನೆ ನೀಡಿದರು.

ತರಬೇತಿ ಅವಧಿಯಲ್ಲಿ ತಮ್ಮ ಯಾವುದೇ ಗೊಂದಲಗಳನ್ನು ಮುಂಚಿತವಾಗಿ ಪರಿಹರಿಸಿಕೊಳ್ಳಬೇಕು ಎಂದು ಹೇಳಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಲಕ್ಷ್ಮಣ ನಿಂಬರಗಿ ಅವರು ಮಾತನಾಡಿ, ಈ ಪರೀಕ್ಷೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಿಮ್ಮ ತಯಾರಿ ಬಹಳ ಮುಖ್ಯ. ಪರೀಕ್ಷಾರ್ಥಿಗಳಿಗೆ ಗೊಂದಲವಾಗದಂತೆ ನೋಡಿಕೊಳ್ಳಿ. ಈ ಪರೀಕ್ಷೆಗಳು ಪ್ರತಿಯೊಬ್ಬ ಅಭ್ಯರ್ಥಿಯ ಜೀವನದ ಭವಿಷ್ಯ ರೂಪಿಸಿಕೊಳ್ಳುವ ಮಹತ್ವದ ಘಟ್ಟಗಳಾಗಿವೆ. ಹಾಗಾಗಿ ಯಾವುದೇ ಕಾರಣಕ್ಕೂ ಪರೀಕ್ಷಾ ಕರ್ತವ್ಯವನ್ನು ತುಂಬಾ ಎಚ್ಚರಿಕೆಯಿಂದ ನಿರ್ವಹಿಸಬೇಕು ಎಂದರು. ಕೊಠಡಿ ಮೇಲ್ವಿಚಾರಕರ ಕಾರ್ಯ ಪ್ರಮುಖವಾಗಿದೆ. ಪರೀಕ್ಷಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ನಿಟ್ಟಿನಲ್ಲಿ ನಿಮ್ಮ ಜವಾಬ್ದಾರಿ ಅರಿಯಬೇಕು ಎಂದು ಎಸ್ಪಿ ಸಲಹೆ ಮಾಡಿದರು.

ಅಪರ ಜಿಲ್ಲಾಧಿಕಾರಿಗಳಾದ ಡಾ.ಔದ್ರಾಮ ಅವರು ಮಾತನಾಡಿ, ಫ್ಲೈಯಿಂಗ್ ಸ್ಕ್ವಾಡ್ ಆಗಿ ಹಿರಿಯ ಅಧಿಕಾರಿಗಳನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಅವರಿಗೆ ನಾಲ್ಕು ಐದು ಕೇಂದ್ರ ಹಂಚಿಕೆ ಮಾಡಲಾಗಿದ್ದು, ಪರೀಕ್ಷೆ ಆರಂಭಕ್ಕೂ ಮೊದಲು ಅಲ್ಲಿರಬೇಕು. ಯಾವುದೇ ಗೊಂದಲಗಳಿದ್ದರೆ ತಕ್ಷಣಕ್ಕೆ ಗಮನಕ್ಕೆ ತರಬೇಕು. ಪರೀಕ್ಷಾ ಸೂಚನೆಗಳನ್ನು ಪಾಲಿಸಿ,ಚುನಾವಣಾ ರೀತಿಯಲ್ಲಿ ಜಿಲ್ಲಾಡಳಿತ ಪರೀಕ್ಷಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಮುಂಜಾಗ್ರತಾ ಕ್ರಮ ವಹಿಸಬೇಕು. ನಾವು ನಿಮ್ಮೊಂದಿಗಿರುತ್ತೇವೆ. ಹಾಗಾಗಿ ಸರಳವಾಗಿ ಹಾಗೂ ಸೂಕ್ಷ್ಮವಾಗಿ ಪರೀಕ್ಷೆ ನಡೆಸೋಣ ಎಂದರು. ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ ಅವರು ಮಾತನಾಡಿ, ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ನಡೆಸಬೇಕು. ಕೇಂದ್ರಗಳಲ್ಲಿ ಗಾಳಿ ಬೆಳಕು ಇರುವಂತೆ ನೋಡಿಕೊಳ್ಳಬೇಕು.

ಹಾಲ್ ಹೊರಗೆ ನೋಂದಣಿ ಸಂಖ್ಯೆ ದೊಡ್ಡದಾಗಿ ಕಾಣುವಂತೆ ಪ್ರಿಂಟ್ ಮಾಡಿ ಅಂಟಿಸಬೇಕು. ಅನಗತ್ಯ ಗೊಂದಲ ಆಗದಂತೆ ನೋಡಿಕೊಳ್ಳಬೇಕು ಎಂದರು. ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಪರೀಕ್ಷೆಯಲ್ಲಿ ಎದುರಿಸುವ ಗೊಂದಲಗಳ ಕುರಿತು ಇದೇ ವೇಳೆ ಪರಿಹರಿಸಿಕೊಂಡರು. ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ.ಎ. ಉಪ್ಪಾರ, ಖಜಾನೆ ಇಲಾಖೆಯ ಉಪ ನಿರ್ದೇಶಕರಾದ ಆನಂದ ಮುಚ್ಚಂಡಿ, ಡಿವೈಎಸ್ಪಿ ನಾಗರಾಜ, ಮಾಸ್ಟರ್ ತರಬೇತಿದಾರರಾದ ಎಲ್.ಜಿ ಕುಂಬಾರ, ಜಗದೀಶ ಗುಲಗಂಜಿ ಸೇರಿದಂತೆ ವಿವಿಧ ಶಾಲಾ-ಕಾಲೇಜುಗಳ ಪರೀಕ್ಷೆ ಕೇಂದ್ರಗಳ ಉಪ ಮುಖ್ಯ ಅಧೀಕ್ಷಕರು ಉಪಸ್ಥಿತರಿದ್ದರು.

# ಲೇಖಕರ ದಿನಚರಿ...

# ಕನಕಗಿರಿಯ ಇತಿಹಾಸದ ಜ್ಞಾನಕೋಶ ದುರ್ಗಾದಾಸ್ ಯಾದವ್

## ‘700 ದೇವಸ್ಥಾನ 700 ಬಾವಿ 700 ಗೊಲ್ಲರ ಮನೆಗಳ ಪರಂಪರೆ; ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಹಿರಿಯ ಮುಖಂಡ”

ಕನಕಗಿರಿ: “ಕಣ್ಣಿದ್ದರೆ ಕನಕಗಿರಿ ನೋಡಿ , ಕಾಲಿದ್ದರೆ ಹಂಪಿ ನೋಡು “ ಎಂಬ ನಾನ್ನುಡಿಯು ಕನಕಗಿರಿಯ ಐತಿಹಾಸಿಕ ಪರಂಪರೆ , ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಸಾರುತ್ತದೆ. ಶ್ರೀ ಕನಕಚಲಪತಿ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನವು , ಇಲ್ಲಿನ ಸಾಲಿಗ್ರಾಮ ಮೂರ್ತಿ ಹಾಗೂ ಹಲವು ಪುರಾತನ ಪರಂಪರೆಗಳು ಕನಕಗಿ–ರಿಯ ವಿಶೇಷತೆಯನ್ನು ಮತ್ತಷ್ಟು ಹೆಚ್ಚಿಸಿವೆ.

ಸ್ಥಳೀಯವಾಗಿ ಪ್ರಚಲಿತದಲ್ಲಿರುವ ಪರಂಪರೆಯ ಕಥನಗಳ ಪ್ರಕಾರ, ಕನಕಗಿರಿಗೆ 700 ದೇವಸ್ಥಾನಗಳು, 700 ಬಾವಿಗಳು ಹಾಗೂ 700 ಗೊಲ್ಲರ ಮನೆಗಳಿದ್ದವು ಎಂಬ ಉಲ್ಲೇಖವಿದೆ. ಅಲ್ಲದೆ, ತ್ರಿವೇಣಿ ಸಂಗಮವೂ ಇಲ್ಲಿನ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವವನ್ನು ಹೆಚ್ಚಿಸಿದೆ ಎಂಬ ಸ್ಥಳೀಯ ನಂಬಿಕೆ ಇದೆ.

ಕನಕಗಿರಿಯ ಪುರಾತನ ಹೆಸರಿನ ಕುರಿತೂ ಹಲವು ಪೌರಾಣಿಕ ಕಥನಗಳು ಪ್ರಚಲಿತದಲ್ಲಿವೆ. ಕನಕಮುನಿ ಎಂಬ ಋಷಿ–ಮುನಿಯ ತಪಸ್ಸಿನ ಸಂದರ್ಭದಲ್ಲಿ ಬಂಗಾರದ ಮಳೆ ಸುರಿಯಿತು. ಅದರಿಂದ ಈ ಪ್ರದೇಶವನ್ನು ಸುವರ್ಣಗಿರಿ ಎಂದು ಕರೆಯಲಾಯಿತು; ಕಾಲಕ್ರಮೇಣ ಸುವರ್ಣಗಿರಿ ಎಂಬ ಹೆಸರು ಕನಕಗಿರಿ ಎಂದು ರೂಪಾಂತರಗೊಂಡಿತು ಎಂಬುದು ಸ್ಥಳೀಯ ಪರಂಪರೆಯ ಕಥನವಾಗಿದೆ.

ಇಂತಹ ಇತಿಹಾಸ ಮತ್ತು ಸ್ಥಳೀಯ ಪರಂಪರೆಯ ಕುರಿತು ಆಳವಾದ ಅರಿವು ಹೊಂದಿರುವ ಹಿರಿಯ ಮುಖಂಡ ಹಾಗೂ ಸಾಮಾಜಿಕ ಹೋರಾಟಗಾರ ದುರ್ಗಾದಾಸ್ ಯಾದವ್ ಅವರು ಕನಕಗಿರಿಯ ಇತಿಹಾಸವನ್ನು ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಗಣ್ಯರಿಗೆ ಪರಿಚಯಿಸುವ ಕಾರ್ಯ ಮಾಡುತ್ತಿದ್ದಾರೆ.

### ದಾಸೋಹದ ಅಧ್ಯಕ್ಷರಾಗಿ ಸೇವೆ

ಶ್ರೀ ಕನಕಚಲಪತಿ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನದ ದಾಸೋಹದ ಅಧ್ಯಕ್ಷರಾಗಿ 24ವರ್ಷ ಸೇವೆ ಸಲ್ಲಿಸಿ, ಭಕ್ತರು ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆ ದೊರೆಯುವ ನಿಟ್ಟಿನಲ್ಲಿ ಅವರು ಕಾರ್ಯನಿರ್ವಹಿಸಿದ್ದಾರೆ. ದೇವಸ್ಥಾನದ ಚಟುವಟಿ–ಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಧಾರ್ಮಿಕ




ಹಾಗೂ ಸಾಮಾಜಿಕ ಸೇವೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಸರಳತೆ?ಸಜ್ಜನಿಕೆಯೇ ಬದುಕಿನ ಮೌಲ್ಯ

ಹಿರಿಯ ಮುಖಂಡರಾಗಿದ್ದರೂ ಇಂದಿಗೂ ಸರಳ ಮತ್ತು ಸಜ್ಜನಿಕೆಯ ಜೀವನ ನಡೆಸುತ್ತಿರುವ ದುರ್ಗಾದಾಸ್ ಯಾದವ್ ಅವರ ವ್ಯಕ್ತಿತ್ವ ಗಮನ ಸೆಳೆಯುತ್ತದೆ. ಸಾರ್ವಜನಿಕ ಜೀವನದಲ್ಲಿ ಅವರು ಗಳಿಸಿರುವ ಗೌರವಕ್ಕೆ ಅವರ ಸರಳತೆ, ಮಾನವೀಯತೆ ಮತ್ತು ಸಮಾಜದ ಬಗ್ಗೆ ಇರುವ ಕಾಳಜಿ ಪ್ರಮುಖ ಕಾರಣವಾಗಿದೆ.

ವಿದ್ಯಾರ್ಥಿಗಳು, ಸಂಶೋಧಕರಿಗೆ ಇತಿಹಾಸದ ಮಾಹಿತಿ ಕನಕಗಿರಿಯ ಇತಿಹಾಸದ ಕುರಿತು ಅಧ್ಯಯನ ನಡೆಸಲು ಆಗಮಿಸುವ ವಿದ್ಯಾರ್ಥಿಗಳು, ಇತಿಹಾಸಾಸಕ್ತರು ಮತ್ತು ಸಂಶೋಧಕರಿಗೆ ಅವರು ಸ್ಥಳೀಯ ಪರಂಪರೆ, ದೇವಸ್ಥಾನದ ಇತಿಹಾಸ ಹಾಗೂ ಕನಕಗಿರಿಯ ವೈಶಿಷ್ಟ್ಯಗಳ ಕುರಿತು ತಮ್ಮಲ್ಲಿರುವ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದಾರೆ. ಪಿಎಚ್.ಡಿ. ಸೇರಿದಂತೆ ಉನ್ನತ ಮಟ್ಟದ ಸಂಶೋಧನೆ ನಡೆಸುವ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೂ ಸ್ಥಳೀಯ ಇತಿಹಾಸದ ಕುರಿತು ಮಾಹಿತಿ ನೀಡಿರುವ ಅವರು, ಜ್ಞಾನವನ್ನು ತಮ್ಮಲ್ಲೇ ಉಳಿಸಿಕೊಳ್ಳದೆ ಮುಂದಿನ ಪೀಳಿಗೆಗೆ ಹಂಚುವ ಕಾರ್ಯ ಮಾಡುತ್ತಿದ್ದಾರೆ.

ಗಣ್ಯ ವ್ಯಕ್ತಿಗಳು, ರಾಜಕಾರಣಿಗಳು, ಐಎಎಸ್?ಐಪಿ–ಎಸ್ ಅಧಿಕಾರಿಗಳಿಗೂ ಕನಕಗಿರಿಯ ವೈಶಿಷ್ಟತೆ ಪರಿಚಯ

ಶ್ರೀ ಕನಕಚಲಪತಿ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನಕ್ಕೆ ಆಗಮಿಸುವ ಐಎಎಸ್, ಐಪಿಎಸ್ ಸೇರಿದಂತೆ ವಿವಿಧ ಅಧಿಕಾರಿಗಳು ಹಾಗೂ ಗಣ್ಯರಿಗೆ ಕನಕಗಿರಿಯ ಇತಿಹಾಸ, ದೇವಸ್ಥಾನದ ಪರಂಪರೆ ಮತ್ತು ಸ್ಥಳೀಯ ಮಹತ್ವದ ಕುರಿತು ವಿವ–ರಿಸುವ ಮೂಲಕ ತಮ್ಮ ಊರಿನ ಇತಿಹಾಸವನ್ನು ಪರಿಚಯಿಸುತ್ತಿದ್ದಾರೆ.



ದುರ್ಗಾದಾಸ್ ಯಾದವ್ ಕನಕಗಿರಿ ಹಿರಿಯ ಮುಖಂಡರು ಹಾಗೂ ಸಾಮಾಜಿಕ ಹೋರಾಟಗಾರರು

ಹೊರಗಿನಿಂದ ಬರುವ ಗಣ್ಯರು ಹಾಗೂ ರಾಜ–ಕಾರಣಿಗಳಿಗೆ ಕನಕಗಿರಿಯ ಪುರಾತನ ಹಿನ್ನೆಲೆಯನ್ನು ತಿಳಿಸುವ ಮೂಲಕ ಸ್ಥಳೀಯ ಇತಿಹಾಸದ ಬಗ್ಗೆ ಅವರಲ್ಲಿ ಆಸಕ್ತಿ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ.

ನಿರಾಶ್ರಿತರಿಗೆ ನೆರವಿನ ಬೆಳಕಿನ ಹಾದಿ

ಸಾಮಾಜಿಕ ಸೇವೆಯಲ್ಲಿಯೂ ದುರ್ಗಾದಾಸ್ ಯಾದವ್ ಅವರು ತಮ್ಮದೇ ಆದ ಗುರುತು ಮೂಡಿಸಿದ್ದಾರೆ. ಸಂಕಷ್ಟದಲ್ಲಿರುವವರು ಮತ್ತು ನಿರಾಶ್ರಿತರಿಗೆ ಸಾಧ್ಯವಾದಷ್ಟು ನೆರವು ನೀಡಿ, ಅವರ ಬದುಕಿನಲ್ಲಿ ಭರವಸೆ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ.

“ಸಮಾಜದಲ್ಲಿ ನಮ್ಮಿಂದಾದಷ್ಟು ಒಳ್ಳೆಯದನ್ನು ಮಾಡಬೇಕು” ಎಂಬ ಮಾನವೀಯ ಮನೋಭಾವದೊಂದಿಗೆ ಅವರು ಅನೇಕರಿಗೆ ನೆರವಿನ ಹಸ್ತ ಚಾಚಿದ್ದಾರೆ.

ಕನಕಗಿರಿಯ ಅಭಿವೃದ್ಧಿಯ ಬಗ್ಗೆ ಕಾಳಜಿ

ಹಿರಿಯ ರಾಜಕಾರಣಿಯಾಗಿ ಅನುಭವ ಹೊಂದಿದ್ದ ಅವರು, ಕನಕಗಿರಿಯನ್ನೂ ತಾಲೂಕು ಮಾಡುವುದರಲ್ಲಿ, ಅವರು ಬಹಳ ಪ್ರಮುಖರಾಗಿದ್ದಾರೆ. ಕನಕಗಿರಿಯನ್ನು ಅಭಿರುದ್ಧಿ ಪಡಿಸಲು, ಜನಪ್ರತಿನಿದಿಗಳ ಆಪ್ತ ಹೊಡನಾಟ ಹೊಂದಿದ್ದ ಅವರು ಕನಕಗಿರಿ ಕ್ಷೇತ್ರವನ್ನ ಅಭಿರುದ್ಧಿ ಪಡಿಸಲು, ರಾಜ–ಕಾರಣಿಗಳ ಗಮನಕ್ಕೆ ಅಭಿರುದ್ಧಿ ವಿಚಾರಗಳನ್ನು ತರುವುದರಲ್ಲಿ ಅವರು ಪ್ರಮುಖರಾಗಿದ್ದರು. ಐತಿಹಾಸಿಕ ಪರಂಪರೆಯ ಸಂರಕ್ಷಣೆ ಮತ್ತು ಯುವಜನರಿಗೆ ಸ್ಥಳೀಯ ಇತಿಹಾಸದ ಅರಿವು ಮೂಡಿಸುವುದಕ್ಕೆ ದುರ್ಗಾದಾಸ್ ಯಾದವ್ ಅವರು ಒತ್ತು ನೀಡುತ್ತಿದ್ದಾರೆ. ಹಿರಿಯ ಮುಖಂಡರಾಗಿ ತಮ್ಮ ಅನುಭವವನ್ನು ಊರಿನ ಒಳಿತಿಗಾಗಿ ಬಳಸಿಕೊಳ್ಳುತ್ತಿರುವುದು ಅವರ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ.

ಇತಿಹಾಸ ತಿಳಿದವರಿಂದ ಇತಿಹಾಸದ ಪಯಣ ಮುಂದುವರಿಯಲಿ

700 ದೇವಸ್ಥಾನ, 700 ಬಾವಿ, 700 ಗೊಲ್ಲರ ಮನೆಗಳು ಮತ್ತು ತ್ರಿವೇಣಿ ಸಂಗಮದಂತಹ ಸ್ಥಳೀಯ ಪರಂಪರೆಯ ಕಥನಗಳಿಂದ ಕೂಡಿರುವ ಕನಕಗಿರಿಯ ಇತಿಹಾಸ, ಶ್ರೀ ಕನಕಚಲಪತಿ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನದ ಧಾರ್ಮಿಕ ಮಹತ್ವ ಹಾಗೂ ಸುವರ್ಣಗಿರಿಯ ಪೌರಾಣಿಕ ನೆನಪುಗಳು ಈ ನೆಲದ ವೈಶಿಷ್ಟ್ಯವನ್ನು ಬಿಂಬಿಸುತ್ತವೆ.

ಈ ಪರಂಪರೆಯ ಕುರಿತು ತಮ್ಮಲ್ಲಿರುವ ಜ್ಞಾನವನ್ನು ವಿದ್ಯಾರ್ಥಿಗಳು, ಸಂಶೋಧಕರು, ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಹಂಚಿಕೊಳ್ಳುತ್ತಿರುವ ದುರ್ಗಾದಾಸ್ ಯಾದವ್ ಅವರು ಕನಕಗಿ–ರಿಯ ಇತಿಹಾಸವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜ್ಞಾನ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

“ಊರಿನ ಇತಿಹಾಸವನ್ನು ತಿಳಿದುಕೊಳ್ಳುವುದು ಹೆಮ್ಮೆ; ಅದನ್ನು ಮುಂದಿನ ಪೀಳಿಗೆಗೆ ತಿಳಿಸುವುದು ಅವರ ಮುಖ್ಯ ಜವಾಬ್ದಾರಿಯಾಗಿತ್ತು .”

ಕನಕಗಿರಿಯ ಇತಿಹಾಸ, ಧಾರ್ಮಿಕ ಪರಂಪರೆ ಮತ್ತು ಸಾಮಾಜಿಕ ಬದುಕಿನ ಬಗ್ಗೆ ಜ್ಞಾನ ಹಂಚಿಕೊಳ್ಳುತ್ತಾ, ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ದುರ್ಗಾದಾಸ್ ಯಾದವ್ ಅವರ ಸೇವೆ ಸ್ಥಳೀಯವಾಗಿ ಗಮನಾರ್ಹವಾಗಿದೆ.



ಹುಲುಗಪ್ಪ ಉಪ್ಪಾರ ಕನಕಗಿರಿ

# ನುಡಿ



ಒಬ್ಬರೊಬ್ಬರ ನಾವು ಅರಿಯದಿರೆ ತೊಂದರೆಯೊ!
ಈ ಬಾಳು ಏಕ ಮುಖ ಸಂಚಾರವಲ್ಲ.
ಪರ ನುಡಿಯ ಮನ್ನಣೆಯೆ ಗೌರವದ ಸಂಕೇತ;
ಸಂವಾದ ಚೆಲುವಿರಲಿ
ಮುದ್ದುರಾಮ.

“ಮಾತಿನಿಂ ನಗೆ ನುಡಿಯು ಮಾತಿನಿಂ ಹಗೆ ಕೊಲೆಯು ಮಾತಿನಂ ಸರ್ವಸಂಪದವು ಲೋಕಕೆ ಮಾತೇ ಮಾಣಿಕವು ಸರ್ವಜ್ಞ” ಎನ್ನುವಂತೆ ನುಡಿಯ ಮಹತ್ವವನ್ನು ಮಾನವ ಅರಿತಿ ರಬೇಕು. ಜಗದಲ್ಲಿ ಯಾವ ಜೀವಿಗಿರದ ವರದಾನ ಮಾನವನಿಗಿದೆ. ಮೂಕ ಭಾಷೆಯಲ್ಲಿ ಸಂವಾದ ನಡೆಸುವ ಪ್ರಾಣಿಗಳಿಗಿಂತ ಮಾನವ ಭಿನ್ನವಾಗಿದ್ದಾನೆ. ಇವನಿಗಿರುವ ಬುದ್ಧಿಮತ್ತೆ ಬೇರೆ ಯಾವ ಪ್ರಾಣಿ ಪಕ್ಷಿಗಳಿಗಿಲ್ಲ ಅಂದಮೇಲೆ ನಮ್ಮ ಮಾತುಗಳಿಗೆ ಮೌಲ್ಯವಿರಬೇಕು, ತೂಕವಿರಬೇಕು. ಎಲ್ಲಿ ಮಾತುಗಳಿಂದ ಕದನವಾಗುತ್ತದೆಯೋ ಅಲ್ಲಿ ಮೌನ ಲೇಸು. ಬಾಳು ಸೈರಣೆಯಿಂದ ಕೂಡಿದಾಗ ಮಾತುಗಳಲ್ಲಿ ಸವಿ ಭಾವ ಅರಳುತ್ತದೆ.

ಪರರ ದೂಷಿಸುವುದಕ್ಕೆ ನಮ್ಮ ನಾಲಿಗೆ ಚಾಚಬಾರದೆಂದು ತಿಳಿದ ಮಹಾತ್ಮರು ಹೇಳಿದ್ದಾರೆ. ಜೀವನದಲ್ಲಿ ಬರುವ ಅನೇಕ ಕಷ್ಟಗಳಿಗೆ ಮಾತುಗಳಿಂದ ಪರಿಹಾರ ದೊರಕುತ್ತದೆ. ಒರಟು ನುಡಿಗಳಿಂದ ನಮ್ಮ ಸುತ್ತಲಿನ ಪರಿಸರ ಜನರ ಮನ ಎಲ್ಲ ರಣ–ರಂಗವಾಗಿ ಪರಿಣಮಿಸುತ್ತದೆ. ಹೇಗೆ ಬಿಟ್ಟ ಬಾಣ ಹಿಂದಕ್ಕೆ ಬರುವುದಿಲ್ಲವೋ ಹಾಗೆ ಅವಸರದ ಮಾತುಗಳು ವಿಷಮತೆಗೆ ದಾರಿ ಮಾಡಿಕೊಡುತ್ತವೆ. ಸಿದ್ದೇಶ್ವರ ಸ್ವಾಮಿಗಳು ಹೇಳಿದಂತೆ ಮಾತು ವಾಹಕ. ಅದಕ್ಕೆ ನಮ್ಮ ಮನದ ಆಸೆ, ದುರಾಸೆ ಯಾವುದನ್ನಾದರೂ ಕೊಂಡೊಯ್ಯುವ ಇತರರಿಗೆ ತಲುಪಿಸುವ ಸಾಮಥ–ರ್ಯವಿದೆ. ಹಿತವಚನ ಕೇಳಿದಾಗ ಮನಸ್ಸು ತೇಲಾಡುವಂತೆ ದುರ್ವಚನ ಕೇಳಿದಾಗ ಮನಸ್ಸು ತಲ್ಲಣವಾಗಿ ಶಪಿಸುವುದೂ ಇದೆ.

ಅದಕ್ಕಾಗಿ ಮೆದು ಮಾತನಾಡುತ್ತ ಸಮಿತ್ರರ ಜೊತೆಗೂಡಿ ಹೃದಯವಂತಿಕೆಯಿಂದ ಸ್ಪಂದಿಸಿದಾಗ ಮಾತ್ರ ನಮ್ಮ ಮೌನ ಬಿರಿದು ಮಾತಾಗಿ ತನ್ನ ಕಂಪಲಿ ಪರರ ಸೆಳೆದು ಸ್ನೇಹದ ರೂಪತಾಳುವುದು. ಮಾತು ನಮ್ಮತನವನ್ನು ತೋರುವ ದರ್ಪಣದಂತಿರಬೇಕು. ನುಡಿಗಳಲ್ಲಿ ಸಕ್ಕರೆಯ ಮಾಧುರ್ಯ ತುಂಬಿದಾಗ ತರ್ಕ ವಿತರ್ಕಗಳಿಗೆ ವಿರಾಮ ತುಂಬಿರುತ್ತದೆ.

ಚಂದನದ ತಂಪಿನಲ್ಲಿ ಮೌನ ಮಿಡಿದು ಮಾತಾಗಿ ಸ್ಪಂದನೆ ಸಂವೇದನೆಯಾಗಿ ಅಂತರಾಳದ ತಿಳಿಯಲಿ ಘನದ ನಿಲುವಾಗಿ ನಮ್ಮತನವನ್ನು ದರ್ಶಿಸುವ ನಗೆ ಸುಮ ವಾಗುವುದೇ ಮಾತು ,ನುಡಿ... ವಾಗ್ಮಯತೆಯ ಮಹತ್ವವನ್ನು ಅರಿತು ಹಿತಮಿತದಲ್ಲಿ ಮಾತನಾಡುತ್ತ ಎಲ್ಲರೊಂದಿಗೆ ಸಮ ಚಿತ್ತದಲ್ಲಿ ಸಹಬಾಳ್ವೆ ಮಾಡೋಣ ಬನ್ನಿ ಜೈ ಹಿಂದ್



ಆರತಿ ಎನ್ ರಾವ್

# ಅಹಮಿಕೆ

ಮರ್ಯಾದೆ ಗೆರೆ ದಾಟಿ ಏನಾದ
ಲಂಕೇಶ?
ಕೀಚಕನಿಗೇನಾಯ್ತು ಒರಟುತನದಿಂದ?
ಶ್ರೀ ಮುಡಿಯ ಹಿಡಿದಳೆದು
ದುಶ್ಯಾಸನೇನಾದ?
ಕೊಬ್ಬಿದರೆ ಇದೆ ಶಾಸ್ತಿ ಮುದ್ದುರಾಮ....

ಧರ್ಮ ಕರ್ಮಗಳಿಂದ ಮಾನವನ ಘನತೆ ಹೆಚ್ಚುತ್ತದೆ. ನಮ್ಮ ವಿದ್ಯೆ ಸದ್ಬಳಕೆ ಆಗದಿದ್ದಾಗ ಅದರಲ್ಲಿ ಗರ್ವವು ಚಿಗುರಿದಾಗ ವಿದ್ಯೆ ಎಷ್ಟಿದ್ದರೂ ಅದು ನಿಷ್ಪ್ರಯೋಜಕವಾಗುತ್ತದೆ. ನಮ್ಮ ಅಹಮಿಕೆ ,ಪ್ರತಿಷ್ಠೆ, ಅಧಿಕಾರ ,ಇವುಗಳು ಮಾನವನ ಯಶಸ್ಸಿನ ಅಡೆತಡೆಗಳು. ನಮ್ಮ ಇತಿಮಿತಿಗಳಿಗಂಕುಶ ನಮ್ಮ ಕೈಯಲ್ಲೇ ಇದೆ. ನಮ್ರತೆಯ ದಾರಿ ಮಾನವನ ಯಶಸ್ಸಿನ ಮೊದಲ ಸೋಪಾನ. ಮಾನವನ ಚಾರಿತ್ರಕ್ಕೆ ಅದುವೇ ಭೂಷಣ. ಅಹಂ ಭಾವ ಅಂತರ್ಮುಖತೆಯಿಂದ ಬಲು ದೂರ. ನಮ್ಮೊಳಗಿನ ಅರಿವಿನ ಅರವಟ್ಟಿಗೆ ಸದಾ ಉಕ್ಕುತ್ತಿರಬೇಕು.

ಅದಕ್ಕೆ ನಾವು ಒಳ್ಳೆಯ ಸತ್ಕಾರ್ಯ ಸದ್ಭಾವನೆಯಿಂದ ಇದ್ದಾಗ ಮಾತ್ರ ವಿನಯದ ಹೊಂಬೆಳಕು ನಮ್ಮಲ್ಲಿರುವ ಅಹಮಿಕೆಯ ಮೇಲೆ ಹಿಡಿತ ಸಾಧಿಸಿ ಅಹಂ ಭಾವದ ದಳ್ಳುರಿಯನ್ನು ಶಮನಗೊಳಿಸಬಲ್ಲದು. ಎಲ್ಲಿ ಅಹಮಿಕೆ ಉದ್ಭವಿಸುತ್ತದೂ  ಅಲ್ಲಿ ಸುವಿವೇಕ ಅಡಗಿ ಅಭಿವೃದ್ಧಿ ಕಾಣದೆ ಕೋಪ ತಾಪ ನಕಾರಾತ್ಮಕತೆಗೆ ದಾರಿ ಮಾಡಿಕೊಡುತ್ತದೆ. ಸಿಟ್ಟಿನಲ್ಲಿದ್ದಾಗ ದಿಕ್ಕು ತಪ್ಪುವುದು ಸಹಜ. ತಪ್ಪು ನಿರ್ಣಯಗಳನ್ನು ತೆಗೆದುಕೊಳ್ಳುತ್ತಾ ನಮ್ಮ ಕೇಡಿಗೆ ನಾವೇ ಬಲೆಯನ್ನು



ಹೆಣೆಯುತ್ತೇವೆ. ಬಾಳು ಅವನಿತ್ತ ವರ.

ಅವಿವೇಕ ಸುವಿವೇಕ ಎರಡು ಒಂದೇ ತಕ್ಕಡಿಯಲ್ಲಿ ತೂಗುವ ಭಾವಗಳು ಅಂದಾಗ ಆಯ್ಕೆ ನಮ್ಮ ಕೈಯಲ್ಲಿರುತ್ತದೆ ಸದ್ಗುರುಗಳು ಹಿರಿಯರು ತೋರಿದ ಆದರ್ಶಗಳಲ್ಲಿ ನಡೆದಾಗ ಬದುಕು ಅಮೃತ ಕಲಶವಾಗುವುದು. ಇಲ್ಲದಿದ್ದರೆ ದುಷ್ಪರಿಣಾಮಗಳ ವಿಷಪ್ರಾಶನ ಲಭ್ಯವಾಗುತ್ತದೆ. ಮನದಲ್ಲಿ ಅಹಮಿಕೆಗೆ ಆಸ್ಪದ ವಿರದಿದ್ದಾಗ ಬಾಳು ಔಚಿತ್ಯದ ನಡೆಯಲಿ ತಪ್ಪುಗಳನ್ನು ತಿದ್ದುವ ಪರಿಜ್ಞಾನ ಪಡೆದು ಜೀವನದಲ್ಲಿ ತಂಗಾಳಿಯ ತಂಪು ಬೀಸುತ್ತದೆ.

ಅಹಮಿ ಕೆ ಎಂದೂ ನಿಶ್ಚಿಂತತೆಯ ತಾಣವಾಗಲಾರದು. ಹಿಂದೆ ನಹುಷ ಮಹಾರಾಜನಿಗೆ ಇಂದ್ರನ ಪದವಿ ದೊರಕಿದಾಗ ಅರಿವಿನಿಂದ ದೂರಾಗಿ ಅಹಮಿಕೆಗೆ ದಾಸನಾಗಿ ಇಂದ್ರನ ರಾಣಿಯ ಪ ಡೆಯಬೇಕೆನ್ನುವ ಹಟಕ್ಕೆ ಬಿದ್ದು ತನ್ನ ಅವನತಿಗೆ ತಾನೇ ಮುನ್ನುಡಿ ಬರೆದುಕೊಂಡ. ಆಗ ಕಳವಳದಿಂದ ಚಿಂತಾಕ್ರಾಂತಳಾದ ಅವಳು ದಿಕ್ಕು ತೋಚದೆ ಕೊನೆಗೊಂದು ಶರತ್ ಇಟ್ಟಳು. ಸಪ್ತ ಋಷಿಗಳು ನಿನ್ನ ಪಲ್ಲಕ್ಕಿ ಹೊತ್ತಾಗ ನಾನು ನಿನ್ನ ಕೈ ಹಿಡಿವೆನೆಂದು ಆಶ್ವಾಸನೆ ಕೊಟ್ಟಳು.

ಆ ದಿನ ಬಂದಿತು ಅಧಿಕಾರದ ಅಮಲಿನಲ್ಲಿ ಮೈಮರೆತ ನಹುಶ ಸಪ್ತ ಋಷಿಗಳು ಹೊತ್ತ ಪಲ್ಲಕ್ಕಿಯಲ್ಲಿ ಆರೂಢನಾಗಿ ಮುಂದಿರುವ ಋಷಿಗಳಿಗೆ ಬೈಯುತ್ತಾ ರೋಷದಿಂದ ಕಾಲಿಂದ ಒದ್ದ ಹಾಗೂ ಎಲೈ ಸರ್ಪವೇ ಹೀಗೆಕೆ ಮಂದವಾಗಿ ಚಲಿಸುತ್ತಿರುವೆ ಎಂದಾಗ ಅಗಸ್ತ್ಯ ಋಷಿಗಳಿಗೆ ಕೋಪ ಬಂದು ಅವನಿಗೆ ತಕ್ಷಣವೇ ಸರ್ಪವಾಗೆಂದು ಶಾಪವಿತ್ತರು. ಅದರ ಫಲ ಸ್ವರೂಪ ನಹುಷ ಸರ್ಪ ನಾದ. ಮತ್ತು ಶಚಿದೇವಿ ಮುಕ್ತಳಾದಳು. ಇದರಿಂದ ಕಲಿಯಬೇಕಾದ ಅನೇಕ ಅಂಶಗಳಿವೆ ಅಧಿಕಾರ, ಅಂತಸ್ತು ಸ್ಥಿರವಲ್ಲ.

ದರ್ಪವು ವಿನಾಶಕ್ಕೆ ಅಂತ್ಯ ಹಾಡುತ್ತದೆ. ಅಧಿಕಾರದಲ್ಲಿದ್ದಾಗ ಸಜ್ಜನರಿಗೆ ಅಪಕಾರ ಮಾಡಿದರೆ ಅದರ ಪಾಪ ದ್ವಿಗುಣಿಸಿ ಅಹಮಿಕೆಯು ಅಂತ್ಯ ಕಾಣುವುದು ನಿಶ್ಚಿತ. ಮತ್ತು ಅಹಮಿಕೆಗೆ ಸಜ್ಜನರು ಮಣಿಯಬೇಕಾದ ಸಂದರ್ಭ ಎದುರಾದರೆ ಅದೊಂದು ದುಷ್ಟ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಆಗುವುದು. ಅನೀತಿ, ಅಸತ್ಯ, ಅತೃಪ್ತ ಸಮಾಜವೆಂದೂ ಸುಖ ತತ್ವ ಕಾಣಲಾರವು ಹೀಗಾಗಿ ಅಹಮಿಕೆಯ ತೊರೆದು ಅರಿತು ಮುನ್ನಡೆಯುವುದರಲ್ಲಿ ಅತಿಶಯಿತಭಾವವಿದೆ. ಅಹಮಿಕೆಯ ಮರೆತು ಸಮಚಿತ್ತ ಶಾಂತಿಯಡೆಗೆ ನಮ್ಮ ಪಯಣವಿರಲಿ ಹಾಗೂ ನಮ್ಮ ಮತ ವಿರಲಿ ಬನ್ನಿ...

# ಮಹಾರಾಷ್ಟ್ರ ಮಾದರಿಯಲ್ಲಿ ರೈತರ ಸಂಪೂರ್ಣ ಸಾಲಮನ್ನಾ ಮಾಡಲು ಒಣಗಿದ ಬೆಳೆಯೊಂದಿಗೆ ಬಿಜೆಪಿ ಪ್ರತಿಭಟನೆ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ಮಹಾರಾಷ್ಟ್ರ ಮಾದರಿಯಲ್ಲಿ ರೈತರ ಸಂಪೂರ್ಣ ಸಾಲಮನ್ನಾ ಮಾಡುವುದು ಹಾಗೂ ವಿವಿಧ ರೈತಪರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬಿಜೆಪಿ ಜಿಲ್ಲಾ ಘಟಕದ ನೇತೃತ್ವದಲ್ಲಿ ಕಾರ್ಯಕತರು ಒಣಗಿದ ಪೈರು, ಒಣಗಿದ ಬೆಳೆಗಳನ್ನು ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಗೆ ಸ್ವತ: ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮೊದಲಾದವರು ರೈತರ ಉಡುಪಿನಲ್ಲಿಯೇ ಆಗಮಿಸಿದರು.**

ಜಿಲ್ಲಾಧಿಕಾರಿಗಳ ಕಚೇರಿ ಎದುರು ರೈತರೊಂದಿಗೆ ಧರಣಿ ನಡೆಸಿ ಸಾಲಮನ್ನಾ ಮಾಡುವಂತೆ ಸರ್ಕಾರಕ್ಕೆ ಒತ್ತಾಯಿಸಿದರು. ನಂತರ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಲಿಖಿತ ಮನವಿ ಸಲ್ಲಿಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ರಾಜ್ಯ ಸರ್ಕಾರ ಕೇವಲ 2500 ರೂ. ಇನಪುಟ್ ಸಬ್ಸಿಡಿ ನೀಡುವ ಮೂಲಕ ಸಂಕಷ್ಟದಲ್ಲಿರುವ ರೈತ ಕುಲಕ್ಕೆ ಅಪಮಾನ ಮಾಡಿದೆ, ಕೂಡಲೇ ಮಹಾರಾಷ್ಟ್ರ ಮಾದರಿಯಲ್ಲಿ ಸಂಪೂರ್ಣ ಸಾಲಮನ್ನಾ ಮಾಡಿ ರೈತನಿಗೆ ಅಭಯ ನೀಡಬೇಕು ಎಂದರು.



ಕೈಯಲ್ಲಿರುವ ಒಣಗಿದ ಬೆಳೆ ವಿಜಯಪುರ ಜಿಲ್ಲೆಯ ರೈತರ ಇಂದಿನ ದುಸ್ಥಿತಿಯ ಸಂಕೇತವಾಗಿದೆ.

ನಾನು ಬಿಜೆಪಿ ಜಿಲ್ಲಾಧ್ಯಕ್ಷನಾಗಿದ್ದರೂ, ಇಂದು ಯಾವುದೇ ಪಕ್ಷದ ಪದಾಧಿಕಾರಿಯಾಗಿ ಅಥವಾ ರಾಜಕೀಯ ಮುಖಂಡನಾಗಿ ಇಲ್ಲಿಗೆ ಬಂದಿಲ್ಲ. ಬದಲಾಗಿ, ಕಷ್ಟದಲ್ಲಿರುವ ರೈತರ ಪ್ರತಿನಿಧಿಯಾಗಿ, ಒಬ್ಬ ಸಾಮಾನ್ಯ ರೈತನಾಗಿ ಈ ಮನವಿಯನ್ನು ಸರ್ಕಾರಕ್ಕೆ ಮಾಡುತ್ತಿರುವೆ ಎಂದರು. ಮಳೆ ಕೈಕೊಟ್ಟಿದ್ದರಿಂದ ನಮ್ಮ ಹೊಲಗಳಲ್ಲಿ ಬೆಳೆ ಒಣಗಿದೆ. ಸಾಲ ಮಾಡಿ ಹಾಕಿದ ಬಂಡವಾಳವೆಲ್ಲಾ ಮಣ್ಣುಪಾಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ ವ್ಯಾಪಕ ನೀರಾವರಿ ಸೌಲಭ್ಯಗಳ ಕೊರತೆಯಿದ್ದು, ಕೃಷಿಯು ಸಂಪೂರ್ಣವಾಗಿ ಮಳೆನೀ–ರಿನ ಮೇಲೆ ಅವಲಂಬಿತವಾಗಿದೆ. ಮಳೆಯ ಕೊರತೆಯಿಂದ ಬಿತ್ತನೆ ಗುರಿ ಪೂರ್ಣವಾಗಿಲ್ಲ, ಅಂತರ್ಜಲ ಹಾಗೂ ಬೋರ್‌ವೆಲ್‌ಗಳ ನೀರಿನ ಮಟ್ಟ ಕುಸಿದಿದೆ, ಮೇವಿನ ಕೊರತೆ ಎದುರಾಗಿದೆ ಎಂದು ರೈತರ ಸಮಸ್ಯೆ ವಿವರಿಸಿದರು.

ಕೂಡಲೇ ಬೆಳೆ ಹಾನಿಯ ಕುರಿತು ವೈಜ್ಞಾನಿಕ ಸಮೀಕ್ಷೆ ನಡೆಸಿ, ರೈತರು ಅನುಭವಿಸಿದ ನಷ್ಟಕ್ಕೆ ತಕ್ಕಂತೆ ಯೋಗ್ಯ ಪರಿಹಾರವನ್ನು ಒದಗಿಸಬೇಕು, ಕೇವಲ ಮಳೆಯ ಅಂಕಿ–ಅಂಶಗಳನ್ನು ಮಾತ್ರ ಆಧಾರವಾಗಿಟ್ಟುಕೊಳ್ಳದೆ; ಬಿತ್ತನೆ ಪ್ರಮಾಣ, ಮಣ್ಣಿನ ತೇವಾಂಶ, ಉಪಗ್ರಹ ಆಧಾರಿತ ಬೆಳೆಯ ಸ್ಥಿತಿ ಮತ್ತು ಜಲ ವೈಜ್ಞಾನಿಕ ಅಂಶಗಳನ್ನು ಪರಿಗಣಿಸಿ ಪರಿಹಾರ ನೀಡಬೇಕು ಎಂದರು. ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ಸಾಲ ಮನ್ನಾ ವಿಚಾರ ಬಂದಾಗ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡುವುದು ಸರಿಯಲ್ಲ. ರಾಜ್ಯ ಸರ್ಕಾರ ಮೊದಲು ತನ್ನ ಪಾಲಿನ ಜವಾಬ್ದಾರಿಯನ್ನು ನಿಭಾಯಿಸಿ, ರೈತರಿಗೆ ನೆರವು ನೀಡಬೇಕು.

ಆನಂತರ ಕೇಂದ್ರದ ಬಳಿ ಹೆಚ್ಚಿನ ಅನುದಾನ ಕೇಳುವುದು ಸೂಕ್ತ. ಕೇಂದ್ರದಿಂದ ಬಂದರಷ್ಟೇ ಕೊಡುತ್ತೇವೆ ಎನ್ನುವ ಬದಲು, ರಾಜ್ಯ ಸರ್ಕಾರ ತನ್ನ ಬದ್ಧತೆಯನ್ನು ಮೊದಲು ಪ್ರದರ್ಶಿಸಬೇಕು ಎಂದು ಒತ್ತಾಯಿಸಿದರು. ನೆರೆಯ ಮಹಾರಾಷ್ಟ್ರದಲ್ಲಿ ಜಾರಿಗೊಳಿಸಿರುವ 'ಅಹಲ್ಯಾಬಾಯಿ ಹೋಳ್ಕರ್ ಕರ್ಜ್ ಮುಕ್ತಿ ಯೋಜನೆ 2026' ಮಾದರಿಯಲ್ಲಿ ರಾಜ್ಯದಲ್ಲೂ ಸಾಲ ಮನ್ನಾ ಆಗಬೇಕು ಎಂಬ ಬೇಡಿಕೆ ಮೊಳಗಿತು. ಜಿಲ್ಲೆಯ ಹಳ್ಳಿಗಳಲ್ಲಿ ಉಲ್ಬಣಿಸಿರುವ ಕುಡಿಯುವ ನೀರಿನ ಸಮಸ್ಯೆಯನ್ನು ತಕ್ಷಣವೇ ಬಗೆಹರಿಸಬೇಕು ಮತ್ತು ಕೃಷಿ ಚಟುವಟಿಕೆಗಳಿಗೆ ನಿಯಮಿತವಾಗಿ ಗುಣಮಟ್ಟದ ವಿದ್ಯುತ್ ಒದಗಿಸಬೇಕು ಎಂಬ ಬೇಡಿಕೆಯನ್ನೂ ಮುಂದಿರಿಸಲಾಯಿತು.

ಮುಖಂಡರಾದ ವಿಜುಗೌಡ ಪಾಟೀಲ, ಉಮೇಶ ಕಾರಜೋಳ, ಬಾಲರಾಜ್‌ರೆಡ್ಡಿ, ಡಾ.ಸುರೇಶ ರೆಡ್ಡಿ, ಸಂದೀಪ್ ಪಾಟೀಲ, ಭರತಕೋಳಿ ಈ ಸಂದರ್ಭದಲ್ಲಿ ಎಸ್.ಎ. ಪಾಟೀಲ, ಚಿದಾನಂದ ಚಲವಾದಿ, ಮಹೇಂದ್ರ ನಾಯಕ, ವಿಜಯ ಜೋಶಿ, ಬಾಲರಾಜ ರೆಡ್ಡಿ, ಕೃಷ್ಣಾ ಗುನ್ನಾಳಕರ, ಉಮೇಶ ಕೋಳಕೂರ, ವಿಕಾಸ ಪದಕಿ, ಜಗದೀಶ ಮುಚ್ಚಂಡಿ, ಈರಣ್ಣ ರಾವೂರ, ಸಂದೀಪ ಪಾಟೀಲ, ರಜನಿ ಸಂಬಣ್ಣಿ, ಸಿದ್ದು ಮಲ್ಲಿಕಾರ್ಜುನ ಮಠ, ಸಿದ್ಧಣಗೌಡ ಬಿರಾದಾರ, ಮಲ್ಲು ಕಲಾದಗಿ, ರಾಜಶೇಖರ ಡೊಳ್ಳಿ, ಶ್ರೀಕಾಂತ ಶಿಂದೆ, ರವಿ ಅರ್ಥವೂರ, ಸಚೀನ ಬೊಂಬಳೆ ಮುಂತಾದವರು ಪಾಲ್ಗೊಂಡಿದ್ದರು.

## ಹನೂರು :ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಬೆಳೆದಿದ್ದ 292 ಗಾಂಜಾ ಗಿಡಗಳು ವಶ

ಅ.ಶ. ಸುದ್ದಿ ಹನೂರು

**ಹನೂರು: ತಾಲೂಕಿನ ಕೂಳಿಹಟ್ಟಿ, ಬೆಳ್ಳಾಜಿ ಬೀಟ್ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿರುವ ಬಗ್ಗೆ ಬಂದ ಖಚಿತ ಮಾಹಿತಿ ಹಿನ್ನೆಲೆಯಲ್ಲಿ ಅಬಕಾರಿ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದಾರೆ.ಈ ವೇಳೆ ಅರಣ್ಯ ಪ್ರದೇಶದಲ್ಲಿ ಬೆಳೆದಿದ್ದ 292 ಗಾಂಜಾ ಗಿಡಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ವಶ ಪಡಿಸಿಕೊಂಡ ಗಾಂಜಾ ಗಿಡಗಳ ಒಟ್ಟು ತೂಕ 213 ಕೆ.ಜಿ. 600 ಗ್ರಾಂ ಇದೆ.**



ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತ ಬಸವರಾಜ ಹಡಪದ, ಬಿ.ಆರ್.ಟಿ. ಡಿಸಿಎಫ್ ಶ್ರೀಪತಿ ಚಾಮರಾಜನಗರ ಜಿಲ್ಲಾ ಅಬಕಾರಿ ಉಪ ಆಯುಕ್ತ ಚಂದ್ರ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ. ಚಾಮರಾಜನಗರ ಉಪವಿಭಾಗದ ಅಬಕಾರಿ ಉಪ ಅಧೀಕ್ಷಕ ಕೆ.ಟಿ. ವಿಜಯ್ ಕುಮಾರ್, ಅಬಕಾರಿ ನಿರೀಕ್ಷಕ ಸಿ.ಎಂ.ದಯಾನಂದ, ಉಮಾಶಂಕರ್, ಬೈಲೂರು ವಲಯ ಅರಣ್ಯಾಧಿಕಾರಿ ಡಿ.ದೇವರಾಜು, ಉಪ ವಲಯ ಅರಣ್ಯಾಧಿಕಾರಿ ಎಸ್.ರಾಜೇಶ್ ನೇತತ್ವದಲ್ಲಿ ದಾಳಿ ನಡೆದಿದೆ. ವಶಪಡಿಸಿಕೊಂಡ ಎಲ್ಲ ಗಾಂಜಾ ಗಿಡಗಳನ್ನು ವಶಕ್ಕೆ ಪಡೆದು ಅಬಕಾರಿ ನಿರೀಕ್ಷಕ ದಯಾನಂದ್ ಹಾಗೂ ಉಪ ನಿರೀಕ್ಷಕಿ ನಂದಿನಿ ಅವರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ. ಆರೋಪಿಗಳ ಪತ್ತೆಗಾಗಿ ತನಿಖೆ ಮುಂದುವರೆದಿದ್ದು, ಈ ಪ್ರಕರಣದ ಸಂಶಯಾಸ್ಪದ ವ್ಯಕ್ತಿಗಳ ಬಗ್ಗೆ ಮಾಹಿತಿ ಇದ್ದರೆ ನೀಡುವಂತೆ ಅಬಕಾರಿ ಹಾಗೂ ಅರಣ್ಯ ಇಲಾಖೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ. ಈ ಸಂಬಂಧ ನೆಲ್ಲಿಕತ್ರಿ ಗ್ರಾಮದ ಐವರ ವಿರುದ್ದ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಅಬಕಾರಿ ಉಪನಿರೀಕ್ಷಕಿ ನಂದಿನಿ ಅವರು ತನಿಖೆ ಮುಂದುವರಿಸಿದ್ದಾರೆ. ಜಂಟಿ ಕಾರ್ಯಾಚರಣೆ ನಡೆಸಿ ಗಾಂಜಾ ಗಿಡಗಳನ್ನು ಪತ್ತೆ ಹಚ್ಚಿದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಕಾರ್ಯವನ್ನು ಅಬಕಾರಿ ಜಂಟಿ ಆಯುಕ್ತರು ಹಾಗೂ ಹಿರಿಯ ಅರಣ್ಯ ಅಧಿಕಾರಿಗಳು ಶ್ಲಾಘಿಸಿದ್ದಾರೆ.

# ಗಂಗಾವತಿ–ದರೋಜಿ 36 ಕಿ.ಮೀ. ರೈಲ್ವೆ ಮಾರ್ಗಕ್ಕೆ ಮಾತ್ರ ಮನವಿ ಏಕೆ

## ಬಾಗಲಕೋಟ?ದರೋಜಿ ಸಂಪೂರ್ಣ ರೈಲ್ವೆ ಯೋಜನೆಗೆ ಆದ್ಯತೆ ನೀಡಲಿ: ದುರ್ಗಾದಾಸ್ ಯಾದವ್




"ಕೇವಲ 36 ಕಿ.ಮೀ. ಮಾರ್ಗದ ಬೇಡಿಕೆಗೆ ಸೀಮಿತವಾಗದೆ, ಇನ್ನೊಂದು ಭಾಗವಾದ ಗಂಗಾವತಿ – ಬಾಗಲಕೋಟ ರೈಲ್ವೆ ಯೋಜನೆಗೆ ಆಗುವ 147 ಕಿ. ಮೀ ಆಗಿದೆ. ರೈಲ್ವೆ ಬೋರ್ಡ್ ಈ ಸಂಪೂರ್ಣ ಯೋಜನೆಗೆ, ಸರ್ವೇ ಕಾರ್ಯಕ್ಕೆ ಮತ್ತು ಯೋಜನಕ್ಕೆ ಆಗುವ ಸಂಪೂರ್ಣ ವೆಚ್ಚದ ವರದಿಯನ್ನೂ ಸಹ ನೀಡಿದೆ. ಬಾಗಲಕೋಟ?ದರೋಜಿ ಸಂಪೂರ್ಣ ರೈಲ್ವೆ ಯೋಜನೆಯನ್ನು ಅನುಷ್ಠಾನ ಮಾಡಬೇಕಾಗಿ ಮಾನ್ಯ ಹಚ್. ಆರ್. ಶ್ರೀನಾಥ್ ಧಣಿ ಯವರ ನೇತೃತ್ವದಲ್ಲಿ, ಈ ಯೋಜನೆ ಮಾರ್ಗಕ್ಕೆ ಬರುವ ಎಲ್ಲಾ ಮುಖಂಡರುಗಳ ಹಾಗೂ ಹೋರಾಟಗಾರರನ್ನು ಜೊತೆಗೂಡಿಸಿ ನಡೆಸಿದ ಹೋರಾಟಕ್ಕೆ, ಈ ಹಿಂದೆ ಮಾನ್ಯ ಮಾಜಿ ಸಂಸದರಾದ ಸಂಗಣ್ಣ ಕರಡಿ ಮತ್ತು ಬಾಗಲಕೋಟ ಸಂಸದರಾದ ಪಿ. ಸಿ. ಗದ್ದಿಗೌಡರ ಇವರಿಬ್ಬರು ಈ ಬಗ್ಗೆ ಕೇಂದ್ರ ರೈಲ್ವೆ ಸಚಿವರ ಗಮನ ಸೆಳೆದು ಒತ್ತಡ ಹೇರಿದ್ದರು. ಅವರ ಕಾರ್ಯವೈಕರಿಂದ ಈ ಯೋಜನೆಯ ಸರ್ವೆ ಕಾರ್ಯ ಹಾಗೂ ಅಂದಾಜು ಮೊತ್ತದ ವರದಿಯನ್ನು ರೈಲ್ವೆ ಬೋರ್ಡ್ ಇಂದ ಶೀಘ್ರ ನಡೆದಿತ್ತು . ಭಾಗಶಃ ಬೇಡಿಕೆಗಿಂತ ಸಮಗ್ರ ಯೋಜನೆಯ ಅನುಷ್ಠಾನವೇ ಈ ಭಾಗದ ಜನರ ಹಿತಕ್ಕೆ ಪೂರಕ" ಎಂದು ಅವರು ತಿಳಿಸಿದ್ದರು . ಈ ಹಿನ್ನೆಲೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಮಾಜಿ ಶಾಸಕರು, ಜನಪ್ರತಿನಿಧಿ ಮುಖಂಡರುಗಳು , ಸಂಘ–ಸಂಸ್ಥೆಗಳು ಹಾಗೂ ರೈಲ್ವೆ ಹೋರಾಟಗಾರರು ಪಕ್ಷಾತೀತವಾಗಿ ಒಗ್ಗೂಡಿ ಬಾಗಲಕೋಟ?ದರೋಜಿ ಸಂಪೂರ್ಣ ರೈಲ್ವೆ ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಪತ್ರಿಕಾ ಹಾಗೂ ಮಾಧ್ಯಮಗಳ ಮೂಲಕ ಮನವಿ ಮಾಡುತಿದ್ದೇನೆ. ? ದುರ್ಗಾದಾಸ್ ಯಾದವ್ ಸಾಮಾಜಿಕ ಹೋರಾಟಗಾರರು ಹಾಗೂ ಸಹಸಂಚಾಲಕರು, ಬಾಗಲಕೋಟ?ದರೋಜಿ ರೈಲ್ವೆ ಹೋರಾಟ ಸಮಿತಿ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಅವರನ್ನು ಭೇಟಿ ಮಾಡಿ ಕೇವಲ ಗಂಗಾವತಿ ದರೋಜಿ 36 ಕಿ.ಮೀ. ರೈಲ್ವೆ ಮಾರ್ಗದ ಬೇಡಿಕೆ ಮುಂದಿಟ್ಟಿರುವ ಮಾಜಿ ಶಾಸಕ ಪರಣ್ಣ ಮಾನವಳ್ಳಿ ಹಾಗೂ ವಿವಿಧ ಸಂಘ–ಸಂಸ್ಥೆಗಳ ಸದಸ್ಯರ ಕ್ರಮಕ್ಕೆ ಬಾಗಲಕೋಟ?ದರೋಜಿ ರೈಲ್ವೆ ಹೋರಾಟ ಸಮಿತಿಯ ಸಹಸಂಚಾಲಕ ದುರ್ಗಾದಾಸ್ ಯಾದವ್ ಬೇಸರ ವ್ಯಕ್ತಪಡಿಸಿದ್ದಾರೆ.**

ಈ ಕುರಿತು ಪ್ರತಿಕ್ರಿಯಿಸಿರುವ ಅವರು, "ಬಾಗಲಕೋಟ?ದರೋಜಿ ಸಂಪೂರ್ಣ ರೈಲ್ವೆ ಯೋಜನೆ ಇವರ ಗಮನಕ್ಕೆ ಬಂದಿಲ್ಲವೇ?" ಎಂದು ಪ್ರಶ್ನಿಸಿದ್ದಾರೆ. ಬಾಗಲಕೋಟ?ದರೋಜಿ ಸಂಪೂರ್ಣ ರೈಲ್ವೆ ಯೋಜನೆಯು ಈ ಭಾಗದ ಜನರ ಬಹುದಿನಗಳ ಬೇಡಿಕೆಯಾಗಿದೆ. ಗಂಗಾವತಿ?ದರೋಜಿ ಮಾರ್ಗ ಮಾತ್ರಕ್ಕೆ ಸೀಮಿತವಾಗಿ ಬೇಡಿಕೆ ಮಂಡಿಸುವ ಬದಲು, ಬಾಗಲಕೋಟದಿಂದ ದರೋಜಿವರೆಗೆ ಇರುವ ಸಂಪೂರ್ಣ ರೈಲ್ವೆ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಅಗತ್ಯವಿದೆ ಎಂದು ಅವರು ತಿಳಿಸಿದ್ದಾರೆ. ಜನರ ಸಮಗ್ರ ಹಿತದೃಷ್ಟಿಯಿಂದ ರೈಲ್ವೆ ಸಂಪರ್ಕದ ಬೇಡಿಕೆಯನ್ನು ತುಂಡು–ತುಂಡಾಗಿ ಮುಂದಿಡುವ ಬದಲು, ಸಂಪೂರ್ಣ ಯೋಜನೆಯನ್ನು ಒಂದೇ ಧ್ವನಿಯಲ್ಲಿ ಸರ್ಕಾರದ ಮುಂದಿಡಬೇಕು.

ಈ ಭಾಗದ ಪ್ರವಾಸೋದ್ಯಮದ ಅಭಿವೃದ್ಧಿ, ಕೈಗಾರಿಕೆ, ಕೃಷಿ, ವ್ಯಾಪಾರ ಹಾಗೂ ಜನರ ಸಂಚಾರಕ್ಕೆ ಅನುಕೂಲವಾಗುವಂತೆ ಬಾಗಲಕೋಟ?ದರೋಜಿ ರೈಲ್ವೆ ಯೋಜನೆಗೆ ಆದ್ಯತೆ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ. ಗಂಗಾವತಿ –ದರೋಜಿ ರೈಲು ಮಾರ್ಗ ನಿರ್ಮಾಣಕ್ಕೆ ಆಗುವ ವೆಚ್ಚಗಳ ಮತ್ತು ವಿವರ: ಗಂಗಾವತಿ (36 ಕಿ.ಮೀ) 10) ದರೋಜಿ ನಡುವಿನ ಹೊಸ ಮಾರ್ಗಕ್ಕಾಗಿ ಕಾರ್ಯಸಾಧ್ಯತಾ ಸಮೀಕ್ಷೆ –ರೈಲ್ವೆ ಮಂಡಳಿಯ ದಿನಾಂಕ 12.05.2022 ರ ಪತ್ರದ ಮೂಲಕ ಮಂಜೂರಾಗಿದೆ ಮತ್ತು ಇದು 2023–24ರ 'ಬ್ಲೂ ಬುಕ್'ನಲ್ಲಿ (ಯೋಜನಾ ದಾಖಲೆ) ಕ್ರಮಸಂಖ್ಯೆ 33 ರಂತೆ ದಾಖಲಾಗಿದೆ. ಅದರಂತೆ ಕಾರ್ಯಸಾಧ್ಯತಾ ಸಮೀಕ್ಷೆಯನ್ನು ನಡೆಸಲಾಗಿದೆ. 919.49 ಕೋಟಿ ರೂ.ಗಳ ಅಂ–ದಾಜು ವೆಚ್ಚದ ಕಾರ್ಯಸಾಧ್ಯತಾ ವರದಿ ಹಾಗೂ (+) 0.81% FIRR ಮತ್ತು (+) 6.48% ಇಖಖಖ ಹೊಂದಿರುವ ಸಂಚಾರ ವರದಿಯನ್ನು (Traffic Report) ಸಿದ್ಧಪಡಿಸಿ, ಸಹಾಯಕ ಹಣಕಾಸು ವಿಭಾಗದಿಂದ ಪರಿಶೀಲಿಸಲಾಗಿದೆ.

ಸಂಯೋಜಿತ ಸಮೀಕ್ಷೆಯ ಅಂದಾಜು ವೆಚ್ಚದ ಇಲಾಖಾವಾರು ವಿವರಗಳು ಈ ಕೆಳಗಿನಂತಿವೆ: ಸಿವಿಲ್ ಎಂಜಿನಿಯರಿಂಗ್ – ರೂ. 771,90,81,512, ಖ&ಖ (ಸಿಗ್ನಲಿಂಗ್ ಮತ್ತು ಟೆಲಿಕಾಂ) – ರೂ. 65,21,56,076, ELECTRICAL (G) – ರೂ. 36,02,12,717, TRD (ಟ್ರಾಕ್ಷನ್ ವಿತರಣೆ)– ರೂ. 46,34,77,610, ಒಟ್ಟು – ರೂ. 919,49,27,915.ರೂಗಳು ಆಗಲಿವೆ ಎಂದು ರೈಲ್ವೆ ಬೋರ್ಡ್ ಮುಖ್ಯ ಆಡಳಿತಾಧಿಕಾ–ರಿಗಳಾದ – ವೆಂಕಟೇಶ್ವರ ರಾವ್.ಟಿ) ಮುಖ್ಯ ಎಂಜಿನಿಯರ್ – |||construction ಹುಬ್ಬಳ್ಳಿ ಇವರು ಅಧಿಕೃತ ವರದಿ ನೀಡಿರುತ್ತಾರೆ.

ಗಂಗಾವತಿ –ಬಾಗಲಕೋಟ ರೈಲು ಮಾರ್ಗ ನಿರ್ಮಾಣ–ಕ್ಕೆ ಆಗುವ ವೆಚ್ಚಗಳು ಮತ್ತು ವಿವರ: ಈದೇ ರೀತಿ, ಬಾಗಲಕೋಟ – ಗಂಗಾವತಿ ನಡುವಿನ ಹೊಸ ಮಾರ್ಗಕ್ಕಾಗಿ ಕಾರ್ಯಸಾಧ್ಯತಾ ಸಮೀಕ್ಷೆ (147 ಕಿ.ಮೀ) – ರೈಲ್ವೆ ಮಂಡಳಿಯ ದಿನಾಂಕ 22.08.2022 ರ ಪತ್ರದ ಮೂಲಕ ಮಂಜೂರಾಗಿದೆ ಮತ್ತು ಇದು 2024–25ರ 'ಬ್ಲೂ ಬುಕ್'ನಲ್ಲಿ ಕ್ರಮಸಂಖ್ಯೆ 39 ರಂತೆ ದಾಖಲಾಗಿದೆ. ಅದರಂತೆ ಕಾರ್ಯಸಾಧ್ಯತಾ ಸಮೀಕ್ಷೆಯನ್ನು ನಡೆಸಲಾಗಿದೆ. 4384.35 ಕೋಟಿ ರೂ.ಗಳ ಅಂದಾಜು ವೆಚ್ಚದ ಕಾರ್ಯಸಾಧ್ಯತಾ ವರದಿ ಹಾಗೂ (–) 1.03% FIRR ಮತ್ತು (+) 3.66% EIRR ಹೊಂದಿರುವ ಸಂಚಾರ ವರದಿಯನ್ನು ಸಿದ್ಧಪಡಿಸಿ, ಸಹಾಯಕ ಹಣಕಾಸು ವಿಭಾಗದಿಂದ ಪರಿಶೀಲಿಸಲಾಗಿದೆ.

ಸಂಯೋಜಿತ ಸಮೀಕ್ಷೆಯ ಅಂದಾಜು ವೆಚ್ಚದ ಇಲಾಖಾವಾರು ವಿವರಗಳು ಈ ಕೆಳಗಿನಂತಿವೆ: CIVIL ENGINEERING – ರೂ. 3853,91,01,781, ಕೋಟಿ, S&T ( ಸಿಗ್ನಲ್ ಮತ್ತು ಟೆಲಿಕಾಂ )– ರೂ. 194,45,75,708 ಕೋಟಿಗಳು , ELECTRICAL (G) –ರೂ. 140,75,61,901 ಕೋಟಿಗಳು , TRD (ಟ್ರಾಕ್ಷನ್ ವಿತರಣೆ) – ರೂ. 195,23,39,488 ಕೋಟಿಗಳು, ಒಟ್ಟು – ರೂ. 4384,35,78,878. ಕೋಟಿ ರೂಗಳು ಆಗಲಿವೆ. ಎಂದು ರೈಲ್ವೆ ಬೋರ್ಡ್ ಮುಖ್ಯ ಆಡಳಿತಾಧಿಕಾ–ರಿಗಳಾದ – ವೆಂಕಟೇಶ್ವರ ರಾವ್.ಟಿ) ಮುಖ್ಯ ಎಂಜಿನಿಯರ್ – |||construction ಹುಬ್ಬಳ್ಳಿ ಇವರು ಅಧಿಕೃತ ವರದಿ ನೀಡಿರುತ್ತಾರೆ.

# ಎಪಿಎಂಸಿಯಲ್ಲಿ ಕೂಲಿ ಮಾಡಿ 3 ಸಾವಿರ ಸಂಗ್ರಹಿಸಿ ಅಂಚೆ ಮೂಲಕ ಸರ್ಕಾರಕ್ಕೆ ರವಾನೆ

ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಬರಪೀಡಿತ ರೈತರ ಖಾತೆಗೆ ರಾಜ್ಯ ಸರ್ಕಾರ ಘೋಷಿಸಿರುವ 2,500 ಪರಿಹಾರವನ್ನು ವಿರೋಧಿಸಿ ಬಿಜೆಪಿ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಟ್ಟಣದ ಎಪಿಎಂಸಿಯಲ್ಲಿ ಕೂಲಿ ಕೆಲಸ ಮಾಡಿ, ಗಳಿಸಿದ ಹಣವನ್ನು ರಾಜ್ಯ ಸರ್ಕಾರಕ್ಕೆ ಅಂಚೆ ಮೂಲಕ ಕಳುಹಿಸುವ ಮೂಲಕ ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು.**

ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಹಾಗೂ ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಅವರ ಸೂಚನೆಯ ಮೇರೆಗೆ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಕಾರ್ಯಕರ್ತರು ಎಪಿಎಂಸಿಯ ವಿವಿಧ ಅಡತಿ ಅಂಗಡಿಗಳಲ್ಲಿ ಕೂಲಿ ಕೆಲಸ ಮಾಡಿದರು. ಸೂರ್ಯಕಾಂತಿ, ತೊಗರಿ ಸೇರಿದಂತೆ ವಿವಿಧ ಧಾನ್ಯಗಳನ್ನು ಚೀಲಗಳಿಗೆ ತುಂಬುವುದು, ಸ್ವಚ್ಛಗೊಳಿಸುವುದು ಸೇರಿದಂತೆ ವಿವಿಧ ಕೆಲಸಗಳನ್ನು ಮಾಡಿ ಸುಮಾರು 3 ಸಾವಿರ ಸಂಗ್ರಹಿಸಿದರು. ನಂತರ ರಾಜ್ಯ ಕಾಂಗ್ರೆಸ್ ಸರ್ಕಾರದ ಪ್ರತಿಕೃತಿಗೆ ?10 ಮುಖಬೆಲೆಯ ನೋಟುಗಳ ಹಾರ ಹಾಕಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈತರ ಪಾಲಿಗೆ ಸರ್ಕಾರ ಮೃತಪಟ್ಟಿದೆ ಎಂಬ ಸಂಕೇತವಾಗಿ ಪ್ರತಿಕೃತಿಯ ಮುಂದೆ ಅಣ–ಕು ಕಣ್ಣೀರು ಹಾಕಿ ಪ್ರತಿಭಟಿಸಿದರು. ಬಳಿಕ ಕೂಲಿ ಮಾಡಿ ಸಂಗ್ರಹಿಸಿದ ಹಣವನ್ನು ಮುಖ್ಯ ಅಂಚೆ ಕಚೇರಿ ಮೂಲಕ ರಾಜ್ಯ ಸರ್ಕಾರಕ್ಕೆ ಕಳುಹಿಸಿದರು.

'ರೈತರು ಭಿಕ್ಷುಕರಲ್ಲ' ಎಪಿಎಂಸಿ ಆಡಳಿತ ಕಚೇರಿ ಎದುರು ಮಾತನಾಡಿದ



ಬಿಜೆಪಿ ಮುಖಂಡರಾದ ಸೋಮನಗೌಡ ಬಿರಾದಾರ, ಗಂಗಾಧರರಾವ್ ನಾಡಗೌಡ, ಹರೀಶ ನಾಟಿ–ಕಾರ, ಶಿವು ಕನ್ನೊಳ್ಳಿ, ಗುರುನಾಥಗೌಡ ಬಿರಾದಾರ, ಸಂಗಮ್ಮ ದೇವರಳ್ಳಿ, ಸಿದ್ದರಾಜ ಹೊಳಿ ಹಾಗೂ ಮಲ್ಲಣ್ಣ ತಂಗಡಗಿ, ಬರಪೀಡಿತ ಮುದ್ದೇಬಿಹಾಳ ಹಾಗೂ ತಾಳಿಕೋಟಿ ತಾಲೂಕುಗಳನ್ನು ಒಳಗೊಂಡಂತೆ ಸಮಗ್ರ ವಿಜಯಪುರ ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಬೇಕೆಂಬ ಹೋರಾಟದ ಫಲವಾಗಿ ಬರ ಘೋಷಣೆಯಾಗಿದೆ. ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಸೂಕ್ತ ನೆರವು ನೀಡಲಿದೆ ಎಂಬ ನಿರೀಕ್ಷೆಯಲ್ಲಿದ್ದಾಗ 2,500 ಪರಿಹಾರ ಘೋಷಿಸಿರುವುದು ರೈತರ ಸ್ವಾಭಿಮಾನಕ್ಕೆ ಧಕ್ಕೆ ತಂದಿದೆ ಎಂದು ಆಕ್ಷೇಪಿಸಿದರು.

ಒಂದು ದಿನದ ಕೂಲಿಯೇ ಸುಮಾರು ?1,000 ಇರುವ ಸಂದರ್ಭದಲ್ಲಿ ರೈತರಿಗೆ ?2,500 ಪರಿಹಾರ ನೀಡುವುದು ಸಮರ್ಪಕವಲ್ಲ. ರೈತರು ಭಿಕ್ಷುಕರಲ್ಲ; ದುಡಿದು ಬದುಕುವ ಸಾಮರ್ಥ್ಯ ಹೊಂದಿದ್ದಾರೆ. ಹೀಗಾಗಿ ಎಪಿಎಂಸಿಯಲ್ಲಿ ಕೂಲಿ ಮಾಡಿ ಗಳಿಸಿದ ಹಣವನ್ನು ಸರ್ಕಾರಕ್ಕೆ ಮರಳಿಸುವ ಮೂಲಕ ಪ್ರತಿಭಟನೆ ನಡೆಸುತ್ತಿದ್ದೇವೆ ಎಂದು ಹೇಳಿದರು. ಬರದ ಕುರಿತು ನಡೆದ ವಿಶೇಷ ಅಧಿವೇಶನಕ್ಕೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಲಾಗಿದೆ. ಒಂದು ಅಧಿವೇಶನದ ಊಟಕ್ಕೆ ?2,500 ವೆಚ್ಚವಾಗುತ್ತದೆ ಎಂದು ಹೇಳಲಾಗುತ್ತಿದೆ.

ಆದರೆ ಸಂಕಷ್ಟದಲ್ಲಿರುವ ರೈತನ ಖಾತೆಗೆ ?2,500 ನೀಡಲಾಗುತ್ತಿದೆ. ಸರ್ಕಾರ ರೈತರ ನೈಜ ಸಂಕಷ್ಟವನ್ನು ಅರಿತು ಸೂಕ್ತ ಪರಿಹಾರ ನೀಡಬೇಕು ಎಂದು ಅವರು ಆಗ್ರಹಿಸಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬೆಂಗಳೂರಿಗೆ ಬರುವವರ ಹಾಗೂ ಶಾಸಕರ ವೈಯಕ್ತಿಕ ವಿವರಗಳ ಬಗ್ಗೆ ಮಾಹಿತಿ ಇದೆ. ಆದರೆ ರೈತರು ಎಷ್ಟು ಸಂಕಷ್ಟ ಅನುಭವಿಸುತ್ತಿದ್ದಾರೆ, ಯಾವ ಬೆಳೆಗಳಲ್ಲಿ ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಅಗತ್ಯ ಗಮನ ನೀಡಿಲ್ಲ ಎಂದು ಮುಖಂಡರು ಆರೋಪಿಸಿದರು. ಬಳಿಕ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಎಪಿಎಂಸಿಯಲ್ಲಿ ಕೂಲಿ ಮಾಡಿ ಸಂಗ್ರಹಿಸಿದ ?3 ಸಾವಿರವನ್ನು ಮುಖ್ಯ ಅಂಚೆ ಕಚೇರಿ ಮೂಲಕ ರಾಜ್ಯ ಸರ್ಕಾರಕ್ಕೆ ಕಳುಹಿಸಿದರು.

ಈ ಸಂದರ್ಭದಲ್ಲಿ ಶಂಕರಗೌಡ ಶಿವಣಗಿ, ಗೌರಮ್ಮ ಹುನಗುಂದ, ಶ್ರೀಶೈಲ್ ದೂಡಮನಿ, ರವೀಂದ್ರ ಬಿರಾದಾರ, ಸುಭಾಷ್ ಕಟ್ಟಿಮನಿ, ಸಂಗಣ್ಣ ಹತ್ತಿ, ಸಂತೋಷ ಬಾದರಬಂಡಿ, ಮಲ್ಲಯ್ಯ ಚೂಂಡಿ, ರಮೇಶ ಢವಳಗಿ, ಚನ್ನಬಸ್ಸು ಮಂಗ್ಯಾಳ, ನರಸಮ್ಮ ಗುಬಚಿ, ಪ್ರಸನ್ನ ಮಠ, ಗಿರೀಶಗೌಡ ಪಾಟೀಲ್ ಮುರಾಳ, ನಾಗೇಶ ಕವಡಿಮಟ್ಟಿ, ಬಸಲಿಂಗಮ್ಮ ಪಾಟೀಲ್, ಬಸವರಾಜ ಗುಳಬಾಳ,





ನಿಖಿಲ್ ಸರೂರ ಸೇರಿದಂತೆ ಬಿಜೆಪಿ ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ಮುಖಂಡರು

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka